

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 08 | Issue : 41 | Sunday 19-10-2025 | E-mail : maruti.b.hosamani76@gmail.com | Page: 4 | Price : Rs. 1/-


## ಸಮಗ್ರ ತನಿಖೆ ಮಾಡುವಂತೆ ರೈತ ಸಂಘದ ಅಧ್ಯಕ್ಷ ಹೊಳೆಯಪ್ಪ ಉಟಕನೂರು ಆಗ್ರಹ





**ಸಿಹಿ ಕಹಿ ಸುದ್ದಿ,**
**ಮಾನ್ವಿ :** ಮಾನ್ವಿ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ನಟರಾಜನ ಕರ್ಮಕಾಂಡ ದಿನಕ್ಕೊಂದು ಬಯಲಾಗುತ್ತಿದ್ದು, ಸಿರವಾರ ತಾಲೂಕಿನ ಬೌದ್ಧ ಯಾತ್ರಾರ್ಥಿಗಳನ್ನು ನಾಗಪುರಕ್ಕೆ ಕಳಿಸದೆ ನಟರಾಜ ಹಣ ಲೂಟಿ ಮಾಡಿದ್ದಾನೆಂದು ರೈತ ಸಂಘದ ತಾಲೂಕಾಧ್ಯಕ್ಷ ಹೊಳೆಯಪ್ಪ ಉಟಕನೂರು ಗಂಭೀರ ಆರೋಪ ಮಾಡಿದ್ದಾರೆ.

ರಾಯಚೂರು ಜಿಲ್ಲೆಯ ಮಾನ್ವಿ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ನಟರಾಜನ ದುರಾಡಳಿತ ಹೆಚ್ಚಾಗಿದ್ದರುಸಹಸರಕಾರಈತನಕರ್ಮಕಾಂಡಮೆಚ್ಚಿ ಉಳಿಸಿ ಕೊಂಡಿದೆಯೇ ಎಂಬುದು ತಿಳಿಯದಾಗಿದೆ. ಸಿರವಾರ ತಾಲೂಕಿನ ಬೌದ್ಧ ಯಾತ್ರಾರ್ಥಿಗಳ ಹೆಸರಲ್ಲಿ ಹಣ ಲೂಟಿಯಾಗಿದೆ ಸಮಗ್ರವಾಗಿ ತನಿಖೆ ಮಾಡಬೇಕು ಎಂದು ಮಾಧ್ಯಮಕ್ಕೆ ಮೂಲಕ ಒತ್ತಾಯಿಸಿದ್ದಾರೆ.

ಮಾನ್ವಿ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿನಟರಾಜನಕರ್ಮಕಾಂಡ ದಿನಕ್ಕೊಂದು ಬಯಲಾದರು ಸಹ ಅವರನ್ನು ಮಾನ್ವಿ ಇಂದ ಯಾಕೆ ವರ್ಗಾವಣೆ ಮಾಡುತ್ತಿಲ್ಲ ಸರಕಾರ ಪ್ರಶ್ನೆ ಮಾಡಿದ್ದಲ್ಲದೆ ಮುಂದಿನ ದಿನಗಳಲ್ಲಿ ನಟರಾಜನ ವಿರುದ್ಧ ಪ್ರತಿಭಟನೆಯು ಅನಿವಾರ್ಯವಾಗುತ್ತದೆ ಎಂದು ಮಾಧ್ಯಮದಲ್ಲಿ ತಿಳಿಸಿದ್ದಾರೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

## ಇನ್ನರ್ ವೀಲ್ ಕ್ಲಬ್‌ನಿಂದ ಏಂಜಲ್ ಕಿಟ್ ವಿತರಣೆ

**ಸಿಹಿ ಕಹಿ ಸುದ್ದಿ,**
**ತರೀಕೆರೆ :** ಪ್ರತಿ ತಿಂಗಳಿಗೊಮ್ಮೆ ಇನರ್ ವೀಲ್ ಕ್ಲಬ್ ನಿಂದ ಸಮಾಜಕ್ಕೆ ಒಳಿತು ಮಾಡುವ ಯಾವುದಾದರೂ ಒಂದು ಕಾರ್ಯಕ್ರಮವನ್ನು ನಾವು ಮಾಡುತ್ತಿರುತ್ತೇವೆ ಎಂದು ಕ್ಲಬ್ ನ ಅಧ್ಯಕ್ಷರಾದ ನೀರಾ ವಾಸುದೇವ್ ಹೇಳಿದರು.

ಅವರು ಶುಕ್ರವಾರ ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಬಾಣಂತಿಯರಿಗೆ ಮತ್ತು ನವಜಾತ ಶಿಶುಗಳಿಗೆ ಉಪಯುಕ್ತವಾದ ಅಗತ್ಯ ವಸ್ತುಗಳ ಏಂಜಲ್ ಕಿಟ್ ನ್ನು ವಿತರಿಸಿ ಮಾತನಾಡಿದರು.

ಪ್ರತಿ ತಿಂಗಳಿನಂತೆ ಈ ತಿಂಗಳು ಸಹ ನಾವು ಬಾಣಂತಿ ಮಹಿಳೆಯರಿಗೆ ಹಾಗೂ ನವಜಾತ ಶಿಶುಗಳಿಗೆ ಸ್ವೆಟ್ಟರ್ ಹಾಗೂ ಇತರೆ ಅಗತ್ಯ ವಸ್ತುಗಳ ಒಳ ಗೊಂಡ ಏಂಜಲ್ ಕಿಟ್ ನ್ನು ವಿತರಿಸುತಿದ್ದೇವೆ ಎಂದು ಹೇಳಿದರು.

ಆಸ್ಪತ್ರೆಯ ವೈದ್ಯಧಿಕಾರಿಯಾದ ಎಂ ಜೆ ಚನ್ನಬಸಪ್ಪ ಮಾತನಾಡಿ ಸರ್ಕಾರದಿಂದ ಬಾಣಂತಿಯರಿಗೆ ಮಡಿಲು ಕಿಟ್ಟು ವಿತರಿ ಸಲಾಗುತ್ತಿತ್ತು ಆದರೆ ಈಗ ಕ್ಲಬ್ ನವರು ಏಂಜಲ್ ಕಿಟ್ಟು ವಿತರಿಸಿ ಬಾಣಂತಿಯರಿಗೆ ಮತ್ತು ನವಜಾತ ಶಿಶುಗಳಿಗೆ ಅಗತ್ಯವಾದ ವಸ್ತುಗಳನ್ನು ಈ ಕಿಟ್ಟಿನಲ್ಲಿರಿಸಿಸಮಾಜಸೇವೆಯನ್ನು ಮಾಡುತ್ತಿದ್ದಾರೆ ಇವರ ಈ ಸೇವೆಯನ್ನು ಹೇಳಿದರು.






ಕ್ಲಬ್ ನ ಕಾರ್ಯದರ್ಶಿಯಾದ ಶ್ವೇತ ದಿನೇಶ್, ಚೈತ್ರ ಚಂದ್ರು, ಮಂಜುಳಾ ಶರತ್, ಪುಷ್ಪ ಕಿಟ್ಟಿ, ಉಮಾ ದಯಾನಂದ್, ಸಂತೋಷ್ ನಾಯರ್, ಪ್ರತಿಭಾ ಶಂಕರ್ ಮುಂತಾದವರು ಉಪಸ್ಥಿತರಿದ್ದರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್. ಕೆ ನ್ಯೂಸ್ ಕನ್ನಡ ಚಾನಲ್:ಎನ್. ವೆಂಕಟೇಶ್. ತರೀಕೆರೆ. ಚಿಕ್ಕಮಗಳೂರು**










# ಆಯುರ್ವೇದ ಸಂಪೂರ್ಣ ಚಿಕಿತ್ಸಾ ಪದ್ಧತಿ: ಭಗವಾನ್




**ಕೊಪ್ಪಳ :** 'ಆಯುರ್ವೇದವು ಒಂದು ಸಂಪೂರ್ಣ ಚಿಕಿತ್ಸಾ ಪದ್ಧತಿಯಾಗಿದ್ದು, ಅಂತರರಾಷ್ಟ್ರೀಯ ಮಟ್ಟದಲ್ಲೂ ಮಾನ್ಯತೆ ಪಡೆಯುವ ಸಾಮರ್ಥ್ಯ ಹೊಂದಿದೆ. ಈ ನಿಟ್ಟಿನಲ್ಲಿ ಗವಿಮಠವು ತನ್ನದೇ ಆದ ಸಾಮಾಜಿಕ ಆರೋಗ್ಯ ಸೇವೆ ಸಲ್ಲಿಸುತ್ತಿದೆ' ಎಂದು ಬೆಂಗಳೂರಿನ ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಉಪಕುಲಪತಿ ಡಾ. ಬಿ.ಸಿ.ಭಗವಾನ್ ಹೇಳಿದರು.

ಎರಡು ದಿನಗಳ ಗವಿದೀಪ್ತಿ–ಕೌಶಲ್ಯ ಭಾರತಿ 2.0 ಅಂತರರಾಷ್ಟ್ರೀಯ ಆಯುರ್ವೇದ ವಿಚಾರ ಸಂಕಿರಣ ಸಮಾರೋಪದಲ್ಲಿ ಶನಿವಾರ ಮಾತನಾಡಿದ ಅವರು ನಶಾಮುಕ್ತ ಭಾರತ ಹಾಗೂ ಅಂಗಾಂಗ ದಾನ ಅಭಿಯಾನಕ್ಕೆ ಚಾಲನೆ ನೀಡಲಾಗಿದ್ದು, ಪ್ರತಿಯೊಬ್ಬರೂ ಅಂಗಾಂಗ ದಾನ ಪ್ರತಿಜ್ಞೆ ಮಾಡಬೇಕು' ಎಂದು ಹೇಳಿದರು.

ಇಲ್ಲಿನ ಗವಿಸಿದ್ದೇಶ್ವರ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಹಾಗೂ ಆರೋಗ್ಯ ಭಾರತಿ ಕರ್ನಾಟಕ ಉತ್ತರ ವಲಯ ಸಹಯೋಗದಲ್ಲಿ ವಿಚಾರ ಸಂಕಿರಣ ಆಯೋಜನೆಯಾಗಿತ್ತು.

ಆಯುರ್ವೇದದಲ್ಲಿ ಸಾಧನೆಗೈದ ವೈದ್ಯರಾದ ಎ.ಐ.ಸಣಕಲ್, ಲಕ್ಷ್ಮಣಾಚಾರ್ಯ ಡಿಂಗಾರೆ, ಮಮತಾ.ಕೆ.ವಿ, ಸಿದ್ದೇಶ ಆರಾಧ್ಯಮಠ ಅವರಿಗೆ 'ಕೌಶಲ್ಯರತ್ನ' ಮತ್ತು ದಿಲೀಪ್‌ಪುರಾಣಿಕ್‌ಅವರಿಗೆಜೀವಮಾನದ ಸಾಧನೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಬೋರ್ಡ್ ಆಫ್ ಆಯುರ್ವೇದದ ಮಾಜಿ ಅಧ್ಯಕ್ಷ ಡಾ.ಬಿ.ಎಸ್.ಪ್ರಸಾದ, ಗವಿಸಿದ್ಧೇಶ್ವರ ಆಯುರ್ವೇದ ಕಾಲೇಜಿನ ಕಾರ್ಯಾಧ್ಯಕ್ಷ ಸಂಜಯ ಕೊತಬಾಳ, ಪ್ರಾಚಾರ್ಯ ಅಧ್ಯಕ್ಷ ಡಾ. ಮಹಾಂತೇಶ ಸಾಲಿಮಠ, ಉಪಪ್ರಾಂಶುಪಾಲ ಡಾ. ಸುರೇಶ ಹಕ್ಕಂಡಿ, ಮಹೇಶ ಮುದಗಲ್, ಡಾ. ಕೆ.ಬಿ.ಹಿರೇಮಠ, ಡಾ. ಸಿದ್ದನಗೌಡ ಪಾಟೀಲ, ಡಾ. ಎಸ್. ಕೆ ಬನ್ನಿಗೋಳ, ಡಾ. ನೇಹಾ ಹಾಗೂ ಡಾ. ಐಶ್ವರ್ಯ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

# 'ಸ್ವಸ್ಥ ಸಮಾಜ ನಿರ್ಮಾಣಕ್ಕೆ ಮುಂದಾಗಿ'



**ಅಳವಂಡಿ:** 'ಮಹಿಳೆಯರು ತಮ್ಮ ಜೊತೆಗೆ ಮಕ್ಕಳನ್ನೂ ಆರೋಗ್ಯವಂತರನ್ನಾಗಿಸುವ ಮೂಲಕ ಸ್ವಸ್ಥ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕು' ಎಂದು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಗಂಗಮ್ಮ ಹೇಳಿದರು.

ಸಮೀಪದ ಕಾತರಕಿ ಗ್ರಾಮದಲ್ಲಿ ಜಿಲ್ಲಾಡಳಿತ, ಜಿ.ಪಂ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಶಿಶು ಅಭಿವೃದ್ಧಿ ಯೋಜನೆ ಕೊಪ್ಪಳ ವತಿಯಿಂದ ನಡೆದ ಪೋಷಣ್ ಅಭಿಯಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಅಂಗನವಾಡಿ ವಲಯ ಮೇಲ್ವಿಚಾರಕಿ ಚಂದ್ರಮ್ಮ ಮಾತನಾಡಿ,'ಕೇಂದ್ರ ಸರ್ಕಾರ ಹಮ್ಮಿಕೊಂಡಿರುವ ರಾಷ್ಟ್ರೀಯ ಪೋಷಣ್ ಅಭಿಯಾನ ಒಂದು ಮಹತ್ತರ ಕಾರ್ಯಕ್ರಮವಾಗಿದೆ. ಬಾಲಕಿಯರು, ಗರ್ಭಿಣಿಯರು ಮತ್ತು ಮಕ್ಕಳನ್ನು ಅಪೌಷ್ಟಿಕತೆಯಿಂದ ಮುಕ್ತಗೊಳಿಸುವ ಕಾರ್ಯಕ್ರಮವಾಗಿದೆ. ಮಹಿಳೆಯರು ಪೋಷಣ್ ಅಭಿಯಾನದಡಿ ದೊರೆಯುವ ಸೌಲಭ್ಯಗಳನ್ನು ಸಮರ್ಪಕವಾಗಿ ಬಳಸಿಕೊಂಡು ಆರೋಗ್ಯ ಕಾಪಾಡಿಕೊಳ್ಳಬೇಕು' ಎಂದರು.

ಬೆಟಗೇರಿಯ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಇರ್ಫಾನ್ ಅಂಜುಮ್ ಮಾತನಾಡಿದರು.

ಇದೇ ವೇಳೆ ಸೀಮಂತ, ಅನ್ನಪ್ರಾಶನ ಕಾರ್ಯಕ್ರಮ ನಡೆಯಿತು. ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶಿವಮ್ಮ ಬೈರಣ್ಣವರ್, ಅಂಗನವಾಡಿ ಮೇಲ್ವಿಚಾರಕಿ ಬಸವಲಿಂಗಮ್ಮ, ಬಾಲ ವಿಕಾಸ ಸಮಿತಿಯ ಸದಸ್ಯೆ ಶಾಂತಮ್ಮ ಹುಬ್ಬಳ್ಳಿ, ಇಲಾಖೆಯ ಮೇಲ್ವಿಚಾರಕಿ ಮಲ್ಲಮ್ಮ, ಆರೋಗ್ಯ ಇಲಾಖೆಯ ಸಿಬ್ಬಂದಿ, ಬೆಟಗೇರಿ ವಲಯದ ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು,ಗರ್ಭಿಣಿಯರು, ಬಾಣಂತಿಯರು ಭಾಗವಹಿಸಿದ್ದರು.

# ಆಸ್ಪತ್ರೆಯಲ್ಲಿ ವಿಚಾರಣಾಧೀನ ಆರೋಪಿಯ ರಂಪಾಟ



**ಕೊಪ್ಪಳ :** ಪ್ರಕರಣವೊಂದರ ವಿಚಾರಣೆಗಾಗಿ ಇಲ್ಲಿಗೆ ಸ್ಥಳಾಂತರಗೊಂಡಿರುವ ಜಿಲ್ಲಾ ಕಾರಾಗೃಹದ ಆರೋಪಿಯನ್ನು ಜಿಲ್ಲಾಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾಗ ಆತ ರಂಪಾಟ ಮಾಡಿದ್ದು, ಪೊಲೀಸರ ಮೇಲೂ ಹಲ್ಲೆಗೆ ಯತ್ನಿಸಿದ್ದಾನೆ.

ಡಿಎಆರ್ ಕೇಂದ್ರದ ಪೊಲೀಸ್ ಅಧಿಕಾರಿ ಸಂತೋಷ ಕೋಚಲಾಪೂರಮಠ ಇತ್ತೀಚೆಗೆ ಆರೋಪಿ ಕಾರ್ಮಿಕ ಮಹಮ್ಮದ್ ಖಲೀಲ್ ಉಲ್ಲಾನನ್ನು ಪೈಲ್ಸ್ ಕಾಯಿಲೆ ಚಿಕಿತ್ಸೆ ಮಾಡಿಸಿಕೊಂಡು ಬರಲು ತಮ್ಮ ಸಿಬ್ಬಂದಿಯೊಂದಿಗೆ ಆಸ್ಪತ್ರೆಗೆ ತೆರಳಿದ್ದಾಗ ಅರೋಪಿ ಏಕಾಏಕಿ ಸಿಟ್ಟಿಗೆದ್ದು ಪೊಲೀಸರನ್ನು ಎಳೆದಾಡಿ ಕೂಗಾಡಿದ್ದಾನೆ. ನಿಮ್ಮ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯನ್ನು ಸ್ಥಳಕ್ಕೆ ಕರೆಯಿಸಿ. ಅವರೊಂದಿಗೆ ಮಾತನಾಡಬೇಕು. ಇಲ್ಲವಾದರೆ ಆಸ್ಪತ್ರೆಯ ಗಾಜು ಒಡೆದು ಹಾಕುತ್ತೇನೆ ಎಂದು ಕೂಗಾಡಿ ಪಕ್ಕದಲ್ಲಿಯೇ ಇದ್ದ ಆಸ್ಪತ್ರೆಗೆ ಬಣ್ಣ ಬಳೆಯುತ್ತಿದ್ದ ಕಾರ್ಮಿಕರ ಹತ್ತಿರದ ಟಿನ್ನರ್ ಬಾಟಲ್ ಎತ್ತಿಕೊಂಡು ಕುಡಿಯಲು ಮತ್ತು ಮೈಮೇಲೆ ಹಾಕಿಕೊಳ್ಳಲು ಪ್ರಯತ್ನಿಸಿದ್ದಾನೆ.

ಜೊತೆಯಲ್ಲಿಯೇ ಇದ್ದ ಪೊಲೀಸರು ಆರೋಪಿಯನ್ನು ಹಿಡಿಯಲು ಹೋದಾಗ ಆತ ಪೊಲೀಸ್ ಸಿಬ್ಬಂದಿ ಹುಲಗಪ್ಪ ಎಂಬುವರಿಗೆ ಗಾಯಗೊಳಿಸಿದ್ದಾನೆ.

ಬಳಿಕ ಎಲ್ಲ ಪೊಲೀಸರು ಸೇರಿ ಹಿಡಿದು–ಕೊಂಡು ಮಹಮ್ಮದ್ ಖಲೀಲ್‌ನನ್ನು ತುರ್ತು ನಿಗಾ ಘಟಕದ ವಾರ್ಡ್‌ಗೆ ಕರೆದುಕೊಂಡು ಹೋಗಿ ದಾಖಲಿಸಿದ್ದಾರೆ.

ಕೂಲಿ ಕೆಲಸ ಮಾಡುವ ಬೆಂಗಳೂರಿನ ಮಹಮ್ಮದ್ ಖಲೀಲ್ ಮೇಲೆ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದ ಮೇಲೆ ಇಲ್ಲಿನ ನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಇತನ ಮೇಲೆ ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ಪೊಲೀಸ್ ಠಾಣೆಯಲ್ಲಿ ಕಳೆದ ವರ್ಷ ದಾಖಲಾದ ಪ್ರಕರಣದ ಆರೋಪಿಯಾಗಿದ್ದಾನೆ.

# ಜಿಲ್ಲಾ ಮಟ್ಟದ ಯುವಜನೋತ್ಸವ 17ಕ್ಕೆ

**ಕೊಪ್ಪಳ:** ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ 2025–26ನೇ ಸಾಲಿನ ಜಿಲ್ಲಾಮಟ್ಟದ ಯುವಜನೋತ್ಸವ ಕಾರ್ಯಕ್ರಮ ಅ. 17ರಂದು ನಗರದ ಸಾಹಿತ್ಯ ಭವನದಲ್ಲಿ ಹಮ್ಮಿಕೊಳ್ಳಲಾಗಿದ್ದು, 15ರಿಂದ 29 ವರ್ಷದ ಒಳಗಿನ ಯುವಜನತೆ ವಿವಿಧ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಬಹುದು.

ಕೇಂದ್ರ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಮಂತ್ರಾಲಯ ರಾಷ್ಟ್ರೀಯ ಮಟ್ಟದ ಯುವಜನೋತ್ಸವ ಪ್ರತಿ ವರ್ಷ ಜ. 12ರಿಂದ 16ರ ವರೆಗೆ ಹಮ್ಮಿಕೊಳ್ಳುತ್ತದೆ. ಈ ಕಾರ್ಯಕ್ರಮಕ್ಕೆ ಕರ್ನಾಟಕದ ವಿಜೇತ ಸ್ಪರ್ಧಾಳುಗಳ ತಂಡವನ್ನು ಕಳುಹಿಸಲು ಜಿಲ್ಲಾ ಮತ್ತು ರಾಜ್ಯ ಮಟ್ಟದ ಯುವಜನೋತ್ಸವ ನಡೆಸಲಾಗುತ್ತದೆ.

ಅದರಂತೆ ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದ ಯುವಜನೋತ್ಸವ ಕಾರ್ಯಕ್ರಮ ನಡೆಯಲಿದ್ದು, ಮೊದಲ ಸ್ಥಾನ ಪಡೆದವರು ರಾಜ್ಯ ಮಟ್ಟದ ಸ್ಪರ್ಧೆಗೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಅವಕಾಶವಿದೆ.

ಜಿಲ್ಲಾ ಮಟ್ಟದಲ್ಲಿ ಜನಪದ ನೃತ್ಯ (ತಂಡ), ಜನಪದ ಗೀತೆ (ತಂಡ) ಪ್ರಾದೇಶಿಕ ಭಾಷೆ, ಕಥೆ ಬರೆಯುವುದು (1000 ಪದಗಳಿಗೆ ಮೀರದಂತೆ, ಹಿಂದಿ, ಆಂಗ್ಲ, ಪ್ರಾದೇಶಿಕ ಭಾಷೆಯಲ್ಲಿ), ಚಿತ್ರಕಲೆ, ಘೋಷಣೆ (ಹಿಂದಿ ಮತ್ತು ಆಂಗ್ಲ ಭಾಷೆಯಲ್ಲಿ ಇರಬೇಕು. ಸ್ಪರ್ಧಿಗಳು ಸಿದ್ಧಪಡಿಸಿಕೊಂಡಿರುವ ಆಯ್ದ ವಿಷಯಗಳ ಬಗ್ಗೆ 7 ನಿಮಿಷಗಳ ಭಾಷಣ ಮಾಡಬೇಕು),

ಕವಿತೆ ಬರೆಯುವುದು (ವೈಯಕ್ತಿಕ: ಹಿಂದಿ, ಆಂಗ್ಲ, ಪ್ರಾದೇಶಿಕ ಭಾಷೆಯಲ್ಲಿ) ಇರುತ್ತದೆ. ನಾವೀನ್ಯತೆ ವಿಭಾಗದಲ್ಲಿ ವಿಜ್ಞಾನ ಮೇಳಕ್ಕೆ ರಾಜ್ಯಮಟ್ಟದ ತನಕ ಮಾತ್ರ ಸ್ಪರ್ಧೆ ಜರುಗಲಿದೆ.

ಜಿಲ್ಲಾ ಮಟ್ಟದ ಯುವಜನೋತ್ಸವ ಪಾಲ್ಗೊಳ್ಳುವ ಆಸಕ್ತರು ಆಧಾರ್ ಕಾರ್ಡ್ ಝೆರಾಕ್ಸ್ ಪ್ರತಿ, ಬ್ಯಾಂಕ್ ಪಾಸ್‌ಬುಕ್ ಪ್ರತಿ, 2–ಭಾವಚಿತ್ರದೊಂದಿಗೆ ಕಾರ್ಯಕ್ರಮ ದಿನದಂದು ಬೆಳಿಗ್ಗೆ 9 ಗಂಟೆ ಒಳಗಾಗಿ ನೋಂದಣಿ ಮಾಡಿಕೊಳ್ಳಬೇಕು.

**ನೋಂದಣಿಗೆ ಸಂಪರ್ಕಿಸಲು ಮನವಿ**

ದೂರವಾಣಿ ಮೂಲಕ ನೋಂದಣಿಗೆ ಬಿ.ಕೀರ್ತಿವರ್ಧನ (7676343554), ತುಕಾರಾಮ (8197398600) ಅವರನ್ನು ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರ ಕಾರ್ಯಾಲಯ,

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಜಿಲ್ಲಾ ಕ್ರೀಡಾಂಗಣ, ಗದಗ ರಸ್ತೆ, ಕೊಪ್ಪಳ ಕಚೇರಿ (08539–230121) ಸಂಪರ್ಕಿಸಬಹುದು ಎಂದು ಇಲಾಖೆಯ ಸಹಾಯಕ ನಿರ್ದೇಶಕ ವಿಠ್ಠಲ ಜಾಬಗೌಡರ ತಿಳಿಸಿದ್ದಾರೆ.

# ಐತಿಹಾಸಿಕ ಕಟ್ಟಡ ಉಳಿಸಲು ಗ್ರಾಮಸ್ಥರ ಮನವಿ

**ಮುನಿರಾಬಾದ್ :** ಸಮೀಪದ ಹುಲಿಗಿಯ ಹುಲಿಗೆಮ್ಮದೇವಿ ದೇವಸ್ಥಾನದ ರಾಜಬೀದಿ ಸೇರಿದಂತೆಗ್ರಾಮದವಿವಿಧರಸ್ತೆಗಳ ಒತ್ತುವರಿ ತೆರವು ಕಾರ್ಯಾಚರಣೆ ಜಿಲ್ಲಾ ಆಡಳಿತದಿಂದ ಶನಿವಾರ ಆರಂಭವಾಗಿದ್ದು, ಭಾನುವಾರ ಕೂಡ ಮುಂದುವರಿದಿದೆ.

ಭಾನುವಾರ ಗ್ರಾಮದ ನಂದಿವೃತ್ತದಿಂದ ಶಿವಪುರ ರಸ್ತೆಯ ಇಕ್ಕೆಲಗಳಲ್ಲಿ, ಚರಂಡಿಯ ಮೇಲೆ ನಿರ್ಮಿಸಿಕೊಂಡ ಮನೆ, ಶೆಡ್ಡುಗಳನ್ನು ತೆರವುಗೊಳಿಸಲಾಯಿತು.



**ಐತಿಹಾಸಿಕ ಕಟ್ಟಡ ಉಳಿಸಿರಿ:** ಹುಲಿಗಿ ಗ್ರಾಮದ ಮಧ್ಯ ಭಾಗದಲ್ಲಿರುವ ಹೈದರಾಬಾದ್ ನಿಜಾಮರ ಕಾಲದ (ಗೋಲ್ ಬಂಗ್ಲೆ) ಐತಿಹಾಸಿಕ, ಪಾರಂಪರಿಕ ಕಟ್ಟಡವಿದ್ದು ಅದನ್ನು ತೆರವುಗೊಳಿಸದಂತೆ ಗ್ರಾಮದ ಕೆಲವರು ಮನವಿ ಮಾಡಿದ್ದಾರೆ. ನಿಜಾಮ ಆಳರಸರ ಕಾಲದಲ್ಲಿ ಕಂದಾಯ ವಸೂಲಿ ಮತ್ತು ಮದ್ದು ಗುಂಡುಗಳ ಸಂಗ್ರಹಣೆಗೆ ಈ ಕಟ್ಟಡವನ್ನು ಬಳಸಲಾಗುತ್ತಿತ್ತು ಎಂದು ಇತಿಹಾಸದಿಂದ ತಿಳಿದು ಬರುತ್ತದೆ. ಇದನ್ನು ಸಂರಕ್ಷಿಸಿ, ಸ್ಥಳೀಯ ಗ್ರಾಮ ಪಂಚಾಯಿತಿಗೆ ಹಸ್ತಾಂತರಿಸಬೇಕು. ಸಾರ್ವಜನಿಕ ಗ್ರಂಥಾಲಯ ಸೇರಿದಂತೆ ವಿವಿಧ ಉದ್ದೇಶಕ್ಕೆ ಸಾರ್ವಜನಿಕ ಬಳಕೆಗೆ ಉಪಯೋಗಿಸಬಹುದು ಎಂದು ಗ್ರಾಮದ ಬಸವರಾಜ ಮೇಟಿ, ಶಿವು ದಳಪತಿ, ಸಂಜೀವ ನಾಯಕ್ ಸೇರಿದಂತೆ ಇತರರು ಜಿಲ್ಲಾಡಳಿತವನ್ನು ಆಗ್ರಹಿಸಿದ್ದಾರೆ.

ತೆರವು ಕಾರ್ಯಾಚರಣೆ ನಿವಾಸಿಗಳಿಗೆ ಶಿಕ್ಷೆ: ಶನಿವಾರದಿಂದ ಆರಂಭವಾದ ಒತ್ತುವರಿ ತೆರವು ಕಾರ್ಯಾಚರಣೆಯ ನೆಪದಲ್ಲಿ ವಿದ್ಯುತ್ ಪೂರೈಕೆ ಕಡಿತಗೊಳಿಸಲಾಗುತ್ತಿದೆ.

ಇದರಿಂದ ಕುಡಿಯುವ ನೀರು ಪೂರೈಕೆಯ ಸಮಸ್ಯೆ, ದೈನಂದಿನ ಚಟುವಟಿಕೆಗಳಿಗೆ ತೊಂದರೆ–ಯಾಗುತ್ತಿದೆ.

ದಯವಿಟ್ಟು ಪರ್ಯಾಯ ವ್ಯವಸ್ಥೆ ಕಲ್ಪಿಸಿಕೊಡಿ ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

# ಮಕ್ಕಳಿಗೆ ತಾಯಿಯೇ ಮೊದಲ ಗುರುವಾಗಲಿ: ವೀರಣ್ಣ ಮತ್ತಿಕಟ್ಟಿ




**ಕೊಪ್ಪಳ :** 'ಸಾಮಾಜಿಕವಾಗಿ ಎಲ್ಲರನ್ನೂ ಸಮಾನವಾಗಿ ಕಾಣುತ್ತ ಸಹಬಾಳ್ವೆಯಿಂದ ಬದುಕುತ್ತಿದ್ದೇವೆ. ನಮ್ಮ ಹಿರಿಯರು ಹಾಕಿಕೊಟ್ಟ ಈ ಸಂಸ್ಕೃತಿಯನ್ನು ಮುಂದಿನವರೂ ಉಳಿಸಿಕೊಂಡು ಹೋಗಬೇಕು. ಮಕ್ಕಳ ಏಳಿಗೆಗೆ ತಾಯಂದಿರೇ ಮೊದಲ ಗುರುವಾಗಬೇಕು' ಎಂದು ವಿಧಾನ ಪರಿಷತ್ತಿನ ಮಾಜಿಸಭಾಪತಿ ವೀರಣ್ಣ ಮತ್ತಿಕಟ್ಟಿ ಹೇಳಿದರು.

ರಾಜ್ಯ ಬಣಜಿಗ ಸಮಾಜದ ಕ್ಷೇಮಾಭಿವೃದ್ಧಿಸಂಘದತಾಲ್ಲೂಕು ಘಟಕ ಭಾನುವಾರ ನಗರದಲ್ಲಿ ಹಮ್ಮಿಕೊಂಡಿದ್ದ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಶೇ 90ಕ್ಕಿಂತಲೂ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳು ಮತ್ತು ಸಮಾಜದ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯಕ್ಕೆ ಏಳು ಜನ ಮುಖ್ಯಮಂತ್ರಿಗಳನ್ನು ನೀಡಿದ ಹೆಗ್ಗಳಿಕೆ ಬಣಜಿಗ ಸಮಾಜಕ್ಕಿದೆ. ಕರ್ನಾಟಕ ಏಕೀಕರಣದಲ್ಲಿಯೂ ಪ್ರಮುಖ ಪಾತ್ರ ವಹಿಸಿದೆ. ಬಸವಣ್ಣನವರ ಕಾಯಕ ಚಿಂತನೆಗೆ ವಿಶ್ವ ಮಾನ್ಯತೆಯಿದೆ' ಎಂದರು.

ನಡೆಯಲು ಕಷ್ಟವಾದರೂ ಜೊತೆಯಿದ್ದವರ ಸಹಾಯದಿಂದ ವೇದಿಕೆ ಏರಿಬಂದ ಅವರು ಹುಮ್ಮಸ್ಸಿನಿಂದ ತಮ್ಮ ಭಾಷಣದಲ್ಲಿ ಕೊಪ್ಪಳದ ಜೊತೆಗಿನ ನಂಟು, ಇಲ್ಲಿನ ರಾಜಕಾರಣಿಗಳ ಜೊತೆ ಹೊಂದಿದ್ದ ಬಾಂಧವ್ಯ ಸ್ಮರಿಸಿಕೊಂಡರು.

ಶಾಸಕ ರಾಘವೇಂದ್ರ ಹಿಟ್ನಾಳ ಮಾತನಾಡಿ 'ಒಗ್ಗಟ್ಟು, ಸಹಬಾಳ್ವೆಗೆ ಹೆಸರಾದ ಬಣಜಿಗ ಸಮಾಜದಿಂದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡಲು ಇಂಥ ಕಾರ್ಯಕ್ರಮ ಆಯೋಜನೆ ಮಾಡಿದ್ದು ಸಂತಸ ತಂದಿದೆ. ಸಮಾಜದ ರಾಜ್ಯಮಟ್ಟದ ಸಂಘಟನೆಯನ್ನ ಹುಟ್ಟುಹಾಕಿದವರು ಕೊಪ್ಪಳದವರು ಎಂಬುದು ಹೆಮ್ಮೆಯ ವಿಚಾರ' ಎಂದು ಹೇಳಿದರು.

ಶಾಸಕ ಮಹೇಶ್ ಟೆಂಗಿನಕಾಯಿ ಮಾತನಾಡಿ 'ಮೊದಲಿನಿಂದ ಕೊಪ್ಪಳದ ಜೊತೆ ಅವಿನಾಭಾವ ಸಂಬಂಧವಿದೆ. ಹುಬ್ಬಳ್ಳಿಯ ಬಸವೇಶ್ವರರ ಮೂರ್ತಿ ಸ್ಥಾಪನೆಗೆ ಇಲ್ಲಿನ ಅಗಡಿ ಸಂಗಣ್ಣನವರ ಬಹುದೊಡ್ಡ ಕೊಡುಗೆಯಿದೆ. ರಾಜ್ಯದಲ್ಲಿ ಸಮಾಜದಿಂದ ಯಾರೂ ಪ್ರತಿನಿಧಿಗಳಿಲ್ಲದ ಸಮಯದಲ್ಲಿ ಸಂಘಟನೆ ಕಟ್ಟಿದವರುವ ವೀರಣ್ಣ ಮತ್ತಿಕಟ್ಟಿ ಅವರು ಅನಾರೋಗ್ಯದ ನಡುವೆಯೂ ಕಾರ್ಯಕ್ರಮಕ್ಕೆ ಬಂದಿರುವುದು ಅವರ ನಿಷ್ಠೆ, ತುಡಿತ ತೋರಿಸುತ್ತದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.


ವಿಧಾನಪರಿಷತ್ ಸದಸ್ಯೆ ಹೇಮಲತಾ ನಾಯಕ, ಬಣಜಿಗ ಕ್ಷೇಮಾಭಿವೃದ್ಧಿ ಸಂಘದ ಕೊಪ್ಪಳ ತಾಲ್ಲೂಕು ಅಧ್ಯಕ್ಷ ವೀರಣ್ಣ ಬಳ್ಳಾ, ಗೌರವಾಧ್ಯಕ್ಷ ಮಲ್ಲಿಕಾರ್ಜುನ ಬಳ್ಳೊಳ್ಳಿ, ಪ್ರಧಾನ ಕಾರ್ಯದರ್ಶಿ ಬಸವರಾಜ ವಿ. ಕಮಲಾಪುರ, ಮಹಿಳಾ ಘಟಕದ ಅಧ್ಯಕ್ಷೆ ಅಪರ್ಣಾ ಬಳ್ಳೊಳ್ಳಿ, ಮಾಜಿ ಶಾಸಕ ಪರಣ್ಣ ಮುನವಳ್ಳಿ, ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ಸಹಾಯಕ ಆಯುಕ್ತ ಅರವಿಂದ ಜಮಖಂಡಿ, ಮುಖಂಡರಾದ ಅಶೋಕ ಹಂಚಲಿ, ಅಂದಪ್ಪ ಜವಳಿ, ಗವಿಸಿದ್ದಪ್ಪ ಕೊಪ್ಪಳ, ವಿಶ್ವನಾಥ ಬಳ್ಳೊಳ್ಳಿ, ಮಹಾಬಳೇಶ ವಡ್ಡಟ್ಟಿ, ಗುರುರಾಜ ಹಲಗೇರಿ, ಮಂಜುನಾಥ ಅಂಗಡಿ, ಶಾಂತೇಶ ಸಂಕ್ಲಾಪುರ, ರಾಜೇಶ ಬೆಳವಣಿಕಿ, ಅರವಿಂದ ಅಗಡಿ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

# ಜಿಲ್ಲಾ ವಕೀಲರ ಸಂಘದ ಸದಸ್ಯತ್ವ ಪಡೆದ ಮೇಘರಾಜ ರೆಡ್ಡಿ. ಗೋನಾಳ



**ಕೊಪ್ಪಳ :** ಜಿಲ್ಲಾ ವಕೀಲರ ಸಂಘದಲ್ಲಿ ಮೇಘರಾಜ ರೆಡ್ಡಿ ಜಿ.ಗೋನಾಳ್ ಅವರು ವಕೀಲರ ಸಂಘದ ಸದಸ್ಯತ್ವವನ್ನು ಸೋಮವಾರದಂದು ಪಡೆದು–ಕೊಂಡರು. ಈ ಸಂದರ್ಭದಲ್ಲಿ ವಕೀಲರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷರಾದ ಎ.ವಿ ಕಣಿವಿ. ಮತ್ತು ಇತರ ಪದಾಧಿಕಾರಿಗಳು ಉಪಸ್ಥಿತರಿದ್ದು. ಯುವ ನ್ಯಾಯವಾದಿ ಮೇಘರಾಜ್ ಗೋನಾಳ್ ಅವರಿಗೆ ಸದಸ್ಯತ್ವ ಪ್ರಮಾಣ ಪತ್ರವನ್ನು ನೀಡಿದರು.ನಂತರ ಸದಸ್ಯತ್ವ ಪ್ರಮಾಣ ಪತ್ರವನ್ನು ಸ್ವೀಕಾರ ಮಾಡಿದ ಮೇಘರಾಜ್ ರೆಡ್ಡಿ ವಕೀಲರು ಮಾಧ್ಯಮದೊಂದಿಗೆ ಮಾತನಾಡಿ ನಮ್ಮ ಜಿಲ್ಲಾ ವಕೀಲ ಸಂಘದಲ್ಲಿ ನನ್ನ ಸದಸ್ಯತ್ವ ನೊಂದಣಿಯಾಗಿದ್ದು ನನಗೆ ಸಂತೋಷ ಮೂಡಿಸಿದೆ. ಅದಕ್ಕಿನ್ನು ಹೆಚ್ಚಿನದಾಗಿ ನಮ್ಮ ಜಿಲ್ಲಾ ವಕೀಲರ ಸಂಘಟನೆಯಲ್ಲಿ ಹಿರಿಯ ವಕೀಲರು, ಹಾಗೂ ಸಾಕಷ್ಟು ಅನುಭವ ಜೀವಿಗಳಿದ್ದು ಸದಾ ಅವರ ಮಾರ್ಗದರ್ಶನ ಪಡೆಯುವ ಜೊತೆಗೆ ಅವರೊಂದಿಗೆ ಕರ್ತವ್ಯ ನಿರ್ವಹಿಸುವ ಭಾಗ್ಯ ನನಗೆ ದೊರೆತಿರುವ ಹೆಮ್ಮೆ ನನಗಿದೆ. ಜಿಲ್ಲಾ ವಕೀಲರ ಸಂಘದಲ್ಲಿ ಉತ್ತಮ ವಾಗ್ಮೀಯ ಹಿರಿಯ ವಕೀಲರು ಸಾಕಷ್ಟಿದ್ದು, ಅವರೊಂದಿಗೆ ನಾನು ಸಹ ಇಂದು ಕರ್ತವ್ಯ ನಿರ್ವಹಿಸುವ ಭಾಗ್ಯ ಅವಕಾಶ ಸಿಕ್ಕಿದ್ದು ನಾನು ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳಲು ಇದೊಂದು ಸುವರ್ಣಾವಕಾಶವನ್ನು ಆರಾಧ್ಯ ದೈವ ಗವಿಸಿದ್ದೇಶ ಕರುಣಿಸಿದ್ದಾನೆ ಎಂದು ತಿಳಿಸಿದರು.

# ಕುಕನೂರಿಗಿಲ್ಲ ಪದವಿ ಕಾಲೇಜು ಭಾಗ್ಯ



**ಕುಕನೂರು :** ಪಟ್ಟಣದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆರಂಭವಾಗದಿರುವುದು ಈ ಭಾಗದ ವಿದ್ಯಾರ್ಥಿಗಳು ಮತ್ತು ಪಾಲಕರ ಅಸಮಾಧಾನಕ್ಕೆ ಕಾರಣವಾಗಿದೆ.

50 ಸಾವಿರ ಜನಸಂಖ್ಯೆ ಹೊಂದಿದ ಕುಕನೂರಿನಲ್ಲಿ ಸರ್ಕಾರಿ,ಅನುದಾನಿತ ಮತ್ತು ಅನುದಾನರಹಿತ ಆರು ಪ್ರೌಢಶಾಲೆ,ಮೊರಾರ್ಜಿದೇಸಾಯಿ ವಸತಿ ಶಾಲೆ, ಸರ್ಕಾರಿ, ಅನುದಾನ ಹಾಗೂ ಅನುದಾನರಹಿತ ಪದವಿಪೂರ್ವ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ.

ಪಕ್ಕದಬನ್ನಿಕೊಪ್ಪ,ಬಿನ್ನಾಳ,ಇಟಗಿ, ಮಸಬಹಂಚಿನಾಳ, ರಾಜೂರು ಗ್ರಾಮಗಳಲ್ಲಿ ಪಿಯು ಕಾಲೇಜು ಇವೆ. ಇವೆಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ಪ್ರತಿವರ್ಷ 2 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಓದುತ್ತಿದ್ದಾರೆ. ಅದರಲ್ಲೂ ಬಡವರು, ಹಿಂದುಳಿದ ಸಮುದಾಯದವರೇ ಹೆಚ್ಚಿದ್ದಾರೆ. ಆದರೆ, ಮುಂದಿನ ಹಂತದ ಕಲಿಕೆಗಾಗಿ ಅವರಿಗೆ ಸ್ಥಳೀಯವಾಗಿ ಸರ್ಕಾರಿ ವ್ಯವಸ್ಥೆ ಇಲ್ಲ. ಹಾಗಾಗಿ ಸರ್ಕಾರಿ ಕಾಲೇಜುಗಳಲ್ಲಿ ಪದವಿ ಶಿಕ್ಷಣ ಪಡೆಯಬೇಕೆಂದರೆ ದೂರದ ಯಲಬುರ್ಗಾ, ಕೊಪ್ಪಳ ನಗರಗಳಿಗೆ ನಿತ್ಯ 15ರಿಂದ 25 ಕಿ.ಮೀ ಕ್ರಮಿಸಿ ಪ್ರಯಾಣಿಸಬೇಕಿದೆ.

ಇಲ್ಲವೆ ಓದನ್ನೇ ಮೊಟಕುಗೊಳಿಸುವ ಪರಿಸ್ಥಿತಿ ಇದೆ. ಈ ಕಾರಣಕ್ಕಾಗಿ ಬಡಮಕ್ಕಳು, ಅದರಲ್ಲೂ ವಿದ್ಯಾರ್ಥಿನಿಯರು ಪಿಯು ಹಂತಕ್ಕೆ ಓದು ನಿಲ್ಲಿಸಿ ಪದವಿ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ.

ಪಟ್ಟಣಕ್ಕೆ 2021ರಲ್ಲಿ ಸರ್ಕಾರಿ ಪದವಿಪೂರ್ವ ಕಾಲೇಜು ಮಂಜೂರಾಗಿದ್ದು, ಕಳೆದ 05 ವರ್ಷಗಳಿಂದ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ವಿಭಾಗದ ತರಗತಿ ನಡೆಯುತ್ತಿವೆ.

ಈಗ ಕಾಲೇಜಿನಲ್ಲಿ 224 ವಿದ್ಯಾರ್ಥಿಗಳು ಓದುತ್ತಿದ್ದಾರೆ. ಪಟ್ಟಣದಲ್ಲಿ ತ್ವರಿತವಾಗಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆರಂಭಿಸಬೇಕೆಂಬ ಒತ್ತಾಯ ಕೇಳಿಬರುತ್ತಿದೆ.ಸ್ವಾತಂತ್ರ್ಯ ನಂತರದ ಕಾಲಘಟ್ಟದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಜಿಲ್ಲೆಯಲ್ಲಿಯೇ ಉತ್ತಮ ಸ್ಥಾನ ಪಡೆದ ಪಟ್ಟಣ.

> ಪಟ್ಟಣದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಇಲ್ಲದಿರುವ ಕಾರಣ ನಾನು ಕೊಪ್ಪಳಕ್ಕೆ ಹೋಗಿ ಬಿ.ಕಾಂ ಓದುತ್ತಿದ್ದೇನೆ. ನಿತ್ಯ 45 ಕಿ.ಮೀ ಸಂಚರಿಸಬೇಕು.
>
> **ರಮೇಶ್, ವಿದ್ಯಾರ್ಥಿ**

ಇಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆರಂಭಿಸಲು ಸರ್ಕಾರ ಗಮನ ಹರಿಸದಿರುವುದು ಸರಿಯಲ್ಲ' ಎಂದು ಸ್ಥಳೀಯರು ದೂರುತ್ತಾರೆ.

ಈ ಭಾಗದ ವಿದ್ಯಾರ್ಥಿಗಳು ಎದುರಿಸುತ್ತಿರುವ ಸಮಸ್ಯೆಯನ್ನು ಕ್ಷೇತ್ರದ ಶಾಸಕ ಬಸವರಾಜ ರಾಯರಡ್ಡಿ ಅವರು ಪರಿಗಣಿಸಬೇಕು. ಶೀಘ್ರವೇಕುಕನೂರಿಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮಂಜೂರುಗೊಳಿಸಬೇಕು.

ಇಲ್ಲದಿದ್ದರೆ ಬೇರೆ ಕಡೆ ಕಡಿಮೆ ದಾಖಲಾತಿ ಇರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನಾದರೂ ಸ್ಥಳಾಂತರಿಸಬೇಕು' ಎಂಬುದು

# ಭಾರತೀಯ ಬಾಲ ವಿದ್ಯಾಲಯ ಶಾಲೆಯ ವಿದ್ಯಾರ್ಥಿ ಮಹೇಶ್ ಜಿ ಸಾಧನೆ : ಶಿಕ್ಷಣ ಮಂಡಳಿ ಅಭಿನಂದನೆ

**ಗಂಗಾವತಿ :** ಏಷಿಯಾ ಬುಕ್ ಆಫ್ ರೆಕಾರ್ಡ್, ಇಂಡಿಯಾ ಬುಕ್ ಆಫ್ ರೆಕಾರ್ಡ್ ಹಾಗೂ ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ಹೆಸರು ದಾಖಲಿಸಿರುವ ಮರಳಿ ಪ್ರಗತಿನಗರ್ ಭಾರತೀಯ ಬಾಲ ವಿದ್ಯಾಲಯ ಸ್ಕೂಲ್ನ ವಿದ್ಯಾರ್ಥಿ ಕುಮಾರ್ ಮಹೇಶ್ ಜಿ ಅವರು ಅತ್ಯಂತ ಶ್ರೇಷ್ಠ ಸಾಧನೆಯ ಮೂಲಕ ಶಾಲೆಗೆ ಕೀರ್ತಿ ತಂದಿದ್ದಾರೆ.ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಉತ್ತೇಜಿಸುವ ಪ್ರಸಿದ್ಧ ಸಂಸ್ಥೆಯಾದ ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ ಆಯೋಜಿಸಿದ್ದ "ನಾನು ವಿಜ್ಞಾನಿ 2025" ಎಂಬ ಶೀರ್ಷಿಕೆಯಡಿ ದೊಡ್ಡಬಳ್ಳಾಪುರದಲ್ಲಿ ನಡೆದ 8 ದಿನಗಳ ಟೆಲಿಸ್ಕೋಪ್



(ದೂರದರ್ಶಕ) ತಯಾರಿಕಾ ತರಬೇತಿಯಲ್ಲಿ ಭಾಗವಹಿಸಿ ಈ ಸಾಧನೆ ಮಾಡಿದ್ದಾರೆ.ಕುಮಾರ್ ಮಹೇಶ್ ಜಿ ಸೇರಿದಂತೆ ಒಟ್ಟು 152 ವಿದ್ಯಾರ್ಥಿಗಳು ಈ ತರಬೇತಿಯಲ್ಲಿ ಪಾಲ್ಗೊಂಡು ಕೇವಲ 8 ದಿನಗಳಲ್ಲಿ ಟೆಲಿಸ್ಕೋಪ್ ನಿರ್ಮಿಸಿ ಇಂಡಿಯಾ, ಏಷಿಯಾ ಹಾಗೂ ವರ್ಲ್ಡ್ ಬುಕ್ ಆಫ್ ರೆಕಾರ್ಡ್ಗಳಲ್ಲಿ ದಾಖಲಾಗುವ ಗೌರವವನ್ನು ಗಳಿಸಿದ್ದಾರೆ. ಇಂತಹ ಶ್ರೇಷ್ಠ ಸಾಧನೆ ಮಾಡಿದ ಕುಮಾರ್ ಮಹೇಶ್ ಜಿ, ಶಿಕ್ಷಕರು ಮಧು ನಾಯರ್ ಇವರಿಗೆ ಮುಖ್ಯೋಪಾಧ್ಯಾಯರಾದ ಹೇಮಂತ ರಾಜ. ಕೆ. ಇನ್ನಿತರ ಶಿಕ್ಷಕರು ಹಾಗೂ ಆಡಳಿತ ಮಂಡಳಿಯವರು ತುಂಬು ಹೃದಯದ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

# ಮಂಜುನಾಥ ಅವರ ಕ್ರಿಯಾಶೀಲತೆ ಮತ್ತು ಸೃಜನಶೀಲತೆ ಅನುಕರಣೀಯ

**ಬೈಲಹೊಂಗಲ :** ಕ್ರಿಯಾಶೀಲತೆ ಮತ್ತು ಸೃಜನಶೀಲತೆ ವ್ಯಕ್ತಿಯ ಸಾಧನೆಗೆ ಸಹಕಾರಿ ಎಂದು ಪಟ್ಟಣದ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪ್ರಾಚಾರ್ಯ ಡಾ. ರಾಘವೇಂದ್ರ ಹುಲಕುಂದ ಹೇಳಿದರು. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಚಕೋರ ವಿಚಾರ ಸಾಹಿತ್ಯ ವೇದಿಕೆಯ ಸಂಚಾಲಕರಾಗಿ ನೇಮಕಗೊಂಡ ಪ್ರೊ. ಮಂಜುನಾಥ ಎಂ. ಅವರಿಗೆ ಮಹಾವಿದ್ಯಾಲಯದಲ್ಲಿ ಬೆಂಗಳೂರಿನ ಕೇಂದ್ರ ಬಸವ ಸಮಿತಿ ವತಿಯಿಂದ ಹಮ್ಮಿಕೊಂಡ ಅಭಿನಂದನಾ ಸಮಾರಂಭದಲ್ಲಿ ಸನ್ಮಾನಿಸಿ ಅವರು ಮಾತನಾಡಿದರು. ಸಾಹಿತ್ಯ, ಕಲೆಯಲ್ಲಿ ಅಪಾರ ಆಸಕ್ತಿ ಹೊಂದಿದ ಮಂಜುನಾಥ ಅವರಿಗೆ ಅಕಾಡೆಮಿಯ ಹುದ್ದೆ ಲಭಿಸಿರುವುದು ನಮ್ಮ ಮಹಾವಿದ್ಯಾಲದ ಹೆಮ್ಮೆ ಎಂದು ಅವರು ಪ್ರಶಂಸೆ ವ್ಯಕ್ತಪಡಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಬೈಲಹೊಂಗಲ ತಾಲೂಕಾಧ್ಯಕ್ಷರಾದ ಎನ್.ಆರ್.ಠಕ್ಕಾಯಿ ಮಾತನಾಡಿ ಕನ್ನಡ ಸಾಹಿತ್ಯ, ಸಂಸ್ಕೃತಿ, ಇತಿಹಾಸದ ಬಗ್ಗೆ ಸಾಕಷ್ಟು ಅಧ್ಯಯನ ಮಾಡಿಕೊಂಡು ಮಂಜುನಾಥ ಅವರು ಅನೇಕ ರಾಷ್ಟ್ರೀಯ ವಿಚಾರ ಸಂಕಿರಣ, ಗೋಷ್ಠಿ, ಕಾರ್ಯಾಗಾರ ಹಾಗೂ ಸಮ್ಮೇಳನಗಳಲ್ಲಿ ಭಾಗಿಯಾಗಿ ತಮ್ಮ ಪಾಂಡಿತ್ಯವನ್ನು ಪ್ರದರ್ಶಿಸಿದ್ದಾರೆ ಎಂದರು.

ಬೆಳಗಾವಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಮೋಹನ ಬಸನಗೌಡ ಪಾಟೀಲ ಮಾತನಾಡಿ ಮಂಜುನಾಥ ಅವರ ವ್ಯಕ್ತಿತ್ವ ಮತ್ತು ಪ್ರತಿಭೆಗೆ ತಕ್ಕ ಗೌರವ ಸನ್ಮಾನಗಳು ಇನ್ನೂ ಹೆಚ್ಚಿನ ರೀತಿಯಲ್ಲಿ ದೊರಕುವಂತಾಗಲಿ ಎಂದು ಶುಭಕೋರಿದರು. ಸರಳ ಸಜ್ಜನಿಕೆಯ ಗುಣ ಹೊಂದಿದ ಅವರು ಪ್ರಯತ್ನವಾದಿಗಳು ಎಂದು ಅಭಿಪ್ರಾಯಪಟ್ಟರು.

ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಪ್ರೊ. ಮಾರುತಿಗೌಡ ಹಿತಾರಗೌಡರ ಅವರು ಮಾತನಾಡಿ ಚಕೋರ ವಿಚಾರ ಸಾಹಿತ್ಯ ವೇದಿಕೆಯ ಸಂಚಾಲಕರಾಗಿ ನೇಮಕಗೊಂಡಿರುವುದು ಕನ್ನಡ ವಿಭಾಗದ ಗೌರವದ ಗರಿಮೆಯನ್ನು ಮತ್ತಷ್ಟು ಹೆಚ್ಚಿಸಿದೆ ಎಂದು ಹೇಳಿದರು.

ಪತ್ರಕರ್ತರಾದ ಮಹಾಂತೇಶ ರಾಜಗೋಳಿ ಮಾತನಾಡಿ ಮಂಜುನಾಥ ಅವರ ಜ್ಞಾನ ಸಂಪತ್ತನ್ನು ವಿದ್ಯಾರ್ಥಿಗಳು ಸದುಪಯೋಗ ಪಡಿಸಿಕೊಳ್ಳಲಿ ಮತ್ತು ಅವರ ಸೇವೆ ಬೈಲಹೊಂಗಲ ನಾಡಿಗೂ ಲಭಿಸುವಂತಾಗಲಿ ಎಂದು ಅವರು ಅಭಿಪ್ರಾಯಪಟ್ಟರು.

ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಪ್ರೊ. ಮಂಜುನಾಥ ಸನ್ಮಾನ ಸ್ವೀಕರಿಸಿ ಮಾತನಾಡಿ ಅಕಾಡೆಮಿ ನಂಬಿಕೆಯಿಟ್ಟು ವಹಿಸಿದ ಜವಾಬ್ದಾರಿಯನ್ನು ಅತ್ಯಂತ ಶ್ರದ್ಧೆ ಮತ್ತು ಪ್ರಾಮಾಣಿಕತೆಯಿಂದ ನಿಭಾಯಿಸುವುದಾಗಿ ಭರವಸೆ ನೀಡಿದರು.

ಪ್ರೀತಿಯಿಂದ ಗೌರವಿಸಿದ ಎಲ್ಲರಿಗೂ ಅವರು ಕೃತಜ್ಞತೆ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಉಪನ್ಯಾಸಕರಾದ ಮಹಾಂತೇಶ ಬಡಿಗೇರ, ಗಿರೆಪ್ಪ ಕಸಾಳೆ, ಸವಿತಾ ಪಾಟೀಲ,

ಡಾ. ಭಾರತಿ ತೆಗ್ಯಾಳ, ಪಾರವ್ವ ಕರಡಿಗುದ್ದಿ, ಡಾ. ವಿಜಯಲಕ್ಷ್ಮಿ ಡೊಂಬರ, ಡಾ. ಮುದ್ದನಗೌಡ ಪಾಟೀಲ, ಮಲ್ಲಿಕಾರ್ಜುನ ದಾಸೋಗ ಹಾಗೂ ಬೆಳವಡಿಯ ವಿದ್ಯಾರ್ಥಿ ಮುಖಂಡ ಶಿವಾನಂದ ಸಂಭೋಜಿ ಉಪಸ್ಥಿತರಿದ್ದರು.

# ‘ಸರಕಾರಿ ಕೆಲಸ, ದೇವರ ಕೆಲಸ’ ಎಂಬ ನಂಬಿಕೆಯಲ್ಲಿ ಸೇವೆ ನೀಡಿ

**ಜಮಖಂಡಿ :** ಸರ್ಕಾರದ ಯೋಜನೆಗಳು ಕಾರ್ಯರೂಪಕ್ಕೆ ಬರಲು ರಾಜ್ಯ ಸರ್ಕಾರಿ ನೌಕರರ ಪಾತ್ರ ಬಹುಮುಖ್ಯವಾಗಿದೆ. ಸಮಾಜದಲ್ಲಿ ಅತ್ಯವಶ್ಯಕವಾಗಿರುವ ನೌಕರರ ಕಷ್ಟಗಳನ್ನು ಸರಿಪಡಿಸಲು ಸಂಘಗಳಿಂದ ಸಹಕಾರಿಯಾಗಲಿದೆ. ನೌಕರರಲ್ಲಿ ಪ್ರವೃತ್ತಿಯ ಸಂಸ್ಕೃತಿ ಎದ್ದು ಕಾಣುತ್ತದೆ ಎಂದು ಕಂದಾಯ ಉಪವಿಭಾಗಾಧಿಕಾರಿ ಶ್ವೇತಾ ಬೀಡಿಕರ ಹೇಳಿದರು.



ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ಸಭಾ ಭವನದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ತಾಲೂಕ ಘಟಕ ಹಮ್ಮಿಕೊಂಡಿದ್ದ ವಾರ್ಷಿಕ ಸರ್ವ ಸದಸ್ಯರ ಮಹಾಸಭೆ ಹಾಗೂ ನೂತನ ಪದಗ್ರಹಣ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಸರಕಾರಿ ನೌಕರರು ಶ್ರದ್ಧೆಯಿಂದ ಕೆಲಸ ಮಾಡಿದಲ್ಲಿ ಸರ್ಕಾರದ ಯೋಜನೆಗಳ ಅನುಷ್ಠಾನ ಮತ್ತು ಸಾರ್ವಜನಿಕ ಸೇವೆಗಳು ಗುಣಮಟ್ಟದ್ದಾಗಲಿವೆ.

ಸಾರ್ವಜನಿಕ ಸೇವೆಯ ಗುಣಮಟ್ಟವನ್ನು ಸುಧಾರಿಸಲು ರಾಜ್ಯ ಸರ್ಕಾರಿ ನೌಕರರ ಸಕ್ರಿಯ ಸಹಭಾಗಿತ್ವ ಮತ್ತು ಬದ್ಧತೆ ಅತ್ಯಗತ್ಯವಾಗಿದೆ. ಸರ್ಕಾರಿ ನೌಕರರು ಉತ್ತಮ ಸೇವೆ ಒದಗಿಸುವಲ್ಲಿ ಬಹಳಷ್ಟು ಶ್ರಮಿಸಬೇಕು.

ಸರಕಾರಿ ಕೆಲಸ, ದೇವರ ಕೆಲಸ ಎಂಬ ನಂಬಿಕೆಯಲ್ಲಿ ಸಾರ್ವಜನಿಕರಿಗೆ ನಾವೆಲ್ಲರೂ ಸೇರಿಕೊಂಡು ಉತ್ತಮ ಸೇವೆಗಳನ್ನು ನೀಡೋಣ ಎಂದರು.

ನೌಕರರ ಸಂಘದ ಜಿಲ್ಲಾಧ್ಯಕ್ಷ ಎಂ. ಬಿ. ಬಳ್ಳಾರಿ ಮಾತನಾಡಿ, ಸಂಘದಿಂದ ಶೇ. 90 ಕ್ಕಿಂತ ಹೆಚ್ಚು ಅಂಕ ಪಡೆದ ನೌಕರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ, ನೌಕರರಿಗಾಗಿ ವಿವಿಧ ಕ್ರೀಡಾಕೂಟ ಆಯೋಜನೆ ಸಹಿತ ವಿವಿಧ ಸ್ಪರ್ಧಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿದೆ. ಮಹಿಳಾ ನೌಕರರಿಗೆ ಮುಟ್ಟಿನ ಸಂದರ್ಭ ವಿಶೇಷ ರಜೆ ಮಂಜೂರು ಆಗಲು ಸಂಘ ಪ್ರಮುಖ ಪಾತ್ರ ವಹಿಸಿದೆ.

ಸರಕಾರಿ ನೌಕರರಿಗೆ ಏಳನೇ ವೇತನ ಜಾರಿ ಮಾಡುವಲ್ಲಿ ತನ್ನದೇಯಾದ ಹೋರಾಟ ಮಾಡುವ ಮೂಲಕ ಯಶಸ್ವಿಯಾಗಿದೆ.

ಇನ್ನು ಹಳೆ ಪಿಂಚಣಿ ಯೋಜನೆ ಅತಿ ಶೀಘ್ರದಲ್ಲಿ ಜಾರಿ ಮಾಡಲು ಸರಕಾರದ ಗಮನ ಸೆಳೆಯುವಲ್ಲಿ ಸಫಲರಾಗಲಿದ್ದೇವೆ ಎಂದರು.

ತಹಶೀಲ್ದಾರ ಅನಿಲ ಬಡಿಗೇರ ಮಾತನಾಡಿದರು. ಇದೇ ಸಂದರ್ಭದಲ್ಲಿ ನೂತನವಾಗಿ ಆಯ್ಕೆಗೊಂಡಿರುವ ಪದಾಧಿಕಾರಿಗಳಿಗೆ ಪ್ರಮಾಣಪತ್ರ ನೀಡಿ ಗೌರವಿಸಲಾಯಿತು.

ವೇದಿಕೆಯಲ್ಲಿ ಸಂಜೀವ ಸತರಡ್ಡಿ, ತಾಲೂಕಾ ವೈದ್ಯಾಧಿಕಾರಿ ಡಾ. ಜಿ. ಎಸ್. ಗಲಗಲಿ, ಸರಕಾರಿ ಆಸ್ಪತ್ರೆ ಸಿಎಂಓ ಡಾ. ವಾಸು ಮುದಿಗೌಡರ, ಡಾ. ಕೃಷ್ಣಾ ಬಣ್ಣದ, ಡಾ. ಪಿ. ಬಿ. ಬಳ್ಳೂರ, ಬಿಇಓ ಎ. ಕೆ. ಬಸನ್ನವರ, ನರೇಂದ್ರ ನಿಡೋಣಿ, ಗೋಪಾಲ ನೀಲನಾಯಕ, ಪ್ರಕಾಶ ಹೊಸಮನಿ, ಬಸವರಾಜ ಹನಗಂಡಿ, ಸಂಗಮೇಶ ಮಲಕಪ್ಪನವರ ಸಹಿತ ಇನ್ನೂ ಹಲವರು ಭಾಗವಹಿಸಿದ್ದರು.

ನೌಕರರ ಸಂಘದ ತಾಲ್ಲೂಕಾಧ್ಯಕ್ಷ ಪಿ. ಬಿ. ಅಜ್ಜನವರ ಸ್ವಾಗತಿಸುವ ಮೂಲಕ ಸಭೆಯ ನಡಾವಳಿಗಳನ್ನು ಮಂಡಿಸಿ ಅನುಮೋದನೆ ಪಡೆದರು.

ಶಿಕ್ಷಕ ಪಿ. ಎಸ್. ಕಟ್ಟಿಮನಿ ಪ್ರಾರ್ಥಿಸಿದರು. ಶಿಕ್ಷಕರಾದ ಎಸ್. ಎಂ. ಕಾಯಿ, ಎಸ್. ಆರ್. ಮುದ್ನೂರ ಸ್ವಾಗತಿಸಿದರು. ವಿಜಯಕುಮಾರ ಯಳಮೇಲಿ ಸೊಗಸಾಗಿ ನಿರೂಪಿಸಿದರು. ಎ. ಎಚ್. ಮುಲ್ಲಾ ವಂದಿಸಿದರು.

# ಆನಂದ ಹೂಗಾರಗೆ ಉತ್ತಮ ಉಪನ್ಯಾಸಕ ಪ್ರಶಸ್ತಿ

**ಜಮಖಂಡಿ :** ನೆರೆಯ ಗೋವಾ ರಾಜ್ಯದ ಮಡಗಾಂವದಲ್ಲಿ ಅಂತರರಾಷ್ಟ್ರೀಯ ಲಯನ್ಸ್ ಸಂಸ್ಥೆ ಹಮ್ಮಿಕೊಂಡಿದ್ದ ಸನ್ಮಾನ ಸಮಾರಂಭದಲ್ಲಿ ತಾಲೂಕಿನ ಹುನ್ನೂರ ಸರಕಾರಿ ಪದವಿ ಪೂರ್ವ ಕಾಲೇಜಿನ ಗಣಿತಶಾಸ್ತ್ರ ವಿಷಯದ ಉಪನ್ಯಾಸಕ ಆನಂದ ಹೂಗಾರ ಅವರಿಗೆ ಉತ್ತಮ ಶಿಕ್ಷಕ ಪ್ರಶಸ್ತಿ ಲಭಿಸಿದೆ. ಇದೇ ಸಂದರ್ಭದಲ್ಲಿ ಗೋವಾ ರಾಜ್ಯದ ಶಿಕ್ಷಣ ಇಲಾಖೆ ಸಮಗ್ರ ಶಿಕ್ಷಣ ನಿರ್ದೇಶನಾಲಯದ ಸಂಯೋಜಕ ಜಾನ್ ಸಿಲ್ವೆಸ್ತ್ರ ಸಿಲ್ವೇರಿಯಾ, ಯೋಗಿರಾಜ, ದಿಗಂಬರ ಕಾಮತ್, ರಾಜನ ತಾಲಕ್, ಜಯಮೋಲ ನಾಯಕ, ಡಾ. ಕೀರ್ತಿ ನಾಯಕ, ಜಮಖಂಡಿ ಲಯನ್ಸ ಕ್ಲಬ್ ಸದಸ್ಯ, ಜಿ.ಎಲ್.ಟಿ. ಸದಸ್ಯ ಎಸ್. ಎಂ. ಕುಂಬಾರ ಉಪಸ್ಥಿತರಿದ್ದರು. ಉತ್ತಮ ಶಿಕ್ಷಕ ಪ್ರಶಸ್ತಿಯಲ್ಲಿ ಗೋವಾ ರಾಜ್ಯದಿಂದ 40 ಮತ್ತು ಕರ್ನಾಟಕದಿಂದ 12 ಜನ ಶಿಕ್ಷಕರು ಪ್ರಶಸ್ತಿಗೆ ಆಯ್ಕೆಗೊಂಡಿದ್ದರು. ಪ್ರಶಸ್ತಿಗೆ ಆಯ್ಕೆಗೊಂಡಿದ್ದ ಶಿಕ್ಷಕರಿಗೆ ಪ್ರಮಾಣ ಪತ್ರ ನೀಡಿ ಗೌರವಿಸಲಾಯಿತು.



ಹುನ್ನೂರಿನ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಸನ್ 2013 ರಿಂದ ಗಣಿತಶಾಸ್ತ್ರ ವಿಷಯದ ಉಪನ್ಯಾಸಕರಾಗಿ ಆನಂದ ಹೂಗಾರ ಬೋಧನೆ ಮಾಡುತ್ತಿದ್ದಾರೆ.

ಅವರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ಉತ್ತಮ ಫಲಿತಾಂಶ ಪಡೆದಿದ್ದಾರೆ. ಜಿಲ್ಲಾ ಹಾಗೂ ರಾಜ್ಯ ಮಟ್ಟದ ಸಂಪನ್ಮೂಲ ವ್ಯಕ್ತಿಯಾಗಿ ಕ್ರಿಯಾಶೀಲರಾಗಿ ಗುರುತಿಸಿಕೊಂಡಿದ್ದಾರೆ. ಅವರ ಸೇವೆಯನ್ನು ಲಯನ್ಸ್ ಸಂಸ್ಥೆ ಪ್ರಶಸ್ತಿ ನೀಡಿ ಗೌರವಿಸಿದೆ.

# ಆಕರ್ಷಕ ಬೃಹತ್ ಪಥ ಸಂಚಲನ: ಕಣ್ತುಂಬಿಕೊಂಡ ಜನತೆ

**ಜಮಖಂಡಿ :** ನಗರದಲ್ಲಿ ಶನಿವಾರ ಹಬ್ಬದ ವಾತಾವಾರಣ ಸೃಷ್ಟಿಯಾಗುವ ಮೂಲಕ ಬೃಹತ್ ಪಥ ಸಂಚಲನಕ್ಕೆ ನಗರವನ್ನು ಸಂಪೂರ್ಣವಾಗಿ ಶೃಂಗರಿಸಲಾಗಿತ್ತು. ನಗರದ ನಮಸ್ಕಾರ ಮಂಡಳಿ ಹಮ್ಮಿಕೊಂಡಿದ್ದ ವಿಜಯದಶಮಿ ಉತ್ಸವ ಮತ್ತು ಬೃಹತ್ ಪಥ ಸಂಚಲನದ ಎರಡು ತಂಡಗಳನ್ನಾಗಿ ನೇಮಕ ಮಾಡಲಾಗಿತ್ತು.



ಪ್ರಥಮ ತಂಡ ನಮಸ್ಕಾರ ಮಂಡಳ ಮೈದಾನದಿಂದ ಆರಂಭಗೊಂಡ ಪಥ ಸಂಚಲನದಲ್ಲಿ 2,500 ಕ್ಕೂ ಹೆಚ್ಚು ಗಣವೇಷಧಾರಿಗಳು ಪಾಲ್ಗೊಂಡಿದ್ದರು.

ನಂತರ ಎರಡನೆಯ ತಂಡ ನಗರದ ಕುಂಚನೂರ ರಸ್ತೆಯಲ್ಲಿರುವ ಸಂತೆ ಮೈದಾನದಿಂದ ಆರಂಭಗೊಂಡ ಪಥ ಸಂಚಲನದಲ್ಲಿ 2,500 ಕ್ಕೂ ಹೆಚ್ಚು ಗಣ ವೇಷಧಾರಿಗಳು ಪಾಲ್ಗೊಂಡಿದ್ದರು.

ನಮಸ್ಕಾರ ಮಂಡಳ ಹಾಗೂ ಕುಂಚನೂರು ರಸ್ತೆಯಿಂದ ಎರಡೂ ತಂಡಗಳಿಂದ ನಗರದ ಪ್ರಮುಖ ರಸ್ತೆಗಳಲ್ಲಿ ಆಕರ್ಷಕ ಪಥ ಸಂಚಲನ ನಡೆಯಿತು. ರಸ್ತೆಯುದ್ದಕ್ಕೂ ಸಾವಿರಾರು ಸಂಖ್ಯೆಯಲ್ಲಿ ಜನರು ನೆರೆದಿದ್ದರು. ಎಂಟು ಘೋಷ ವಾದ್ಯಮೇಳಗಳು, ಐದು ಸಾವಿರಕ್ಕೂ ಹೆಚ್ಚು ಜನ ಗಣವೇಶಧಾರಿಗಳು ಪಥ ಸಂಚಲನದಲ್ಲಿ ಭಾಗವಹಿಸಿದ್ದರು. ಗಣವೇಶಧಾರಿಗಳಿಗೆ ಮಕ್ಕಳು, ಮಹಿಳೆಯರು ದಾರಿಯುದ್ದಕ್ಕೂ ಪುಷ್ಪವೃಷ್ಟಿಗೈದು ಸಂಭ್ರಮಿಸಿದರು. ಪಥ ಸಂಚಲನದ ರಸ್ತೆಗಳನ್ನು ತೋರಣ, ಬಣ್ಣ ಬಣ್ಣದ ರಂಗೋಲಿಗಳಿಂದ ಅಲಂಕರಿಸಲಾಗಿತ್ತು. ಪುಟ್ಟಮಕ್ಕಳು ಭಾರತಮಾತೆ ಛದ್ಮವೇಷ ತೊಟ್ಟು ಅಲಂಕಾರ ಮಾಡಿ ಕೊಂಡಿದ್ದರು. ನಮಸ್ಕಾರ ಮಂಡಳಿ ಆರಂಭಗೊಂಡ ತಂಡ ಮತ್ತು ಕುಂಚನೂರ ರಸ್ತೆಯಿಂದ ಆರಂಭಗೊಂಡ ಗಣವೇಶಧಾರಿಗಳ ಎರಡು ತಂಡಗಳು: ನಗರದ ಅಶೋಕ ವೃತ್ತದಲ್ಲಿ ಸಮಾಗಮಗೊಂಡು ಬೈಪಾಸ್ ರಸ್ತೆಯಲ್ಲಿರುವ ನಮಸ್ಕಾರ ಮಂಡಳಿ ಮೈದಾನದವರೆಗೆ ಪೊಲೀಸ ಬಿಗಿ ಬಂದೋಬಸ್ತಿನಲ್ಲಿ ಆಕರ್ಷಕ ಪಥ ಸಂಚಲನ ನಡೆಯಿತು.

# ಬೆಳೆ ಹಾನಿ: ಸಮೀಕ್ಷೆ ನಡೆಸಿ ಪರಿಹಾರ ನೀಡಲು ಆಗ್ರಹ

**ಹೊರ್ತಿ :** ಸತತ ಮತ್ತು ಭಾರಿ ಮಳೆಯಿಂದ ತೊಗರಿ, ಗೋವಿನ ಜೊಳ, ಶೇಂಗಾ, ಹತ್ತಿ, ದ್ರಾಕ್ಷಿ, ಉಳ್ಳಾಗಡ್ಡಿ ಮುಂತಾದ ಬೆಳೆಗಳು ಹಾನಿಯಾದ ರೈತರಿಗೆ ಸರ್ಕಾರ ಮತ್ತು ಜಿಲ್ಲಾಡಳಿತ ಈ ಕೂಡಲೇ ಸಮೀಕ್ಷೆ ನಡೆಸಿ ಸೂಕ್ತ ಪರಿಹಾರ ನೀಡಬೇಕು ಮತ್ತು ಮತ ಕ್ಷೇ ತ್ರದ ಎಲ್ಲ ಗ್ರಾಮಗಳ ರಸ್ತೆಗಳು ಕೂಡಾ ಹದಗೆಟ್ಟಿವೆ ಈ ರಸ್ತೆಗಳ ದುರಸ್ತಿಗೆ ಕ್ರಮ ಕೈ ಗೊಳ್ಳಬೇಕು’ ಎಂದು ಮಾಜಿ ಶಾಸಕ ದೇವಾನಂದ ಎಫ್.ಚವ್ಹಾಣ ಆಗ್ರಹಿಸಿದರು.



ಸಮೀಪದ ನಾಗಠಾಣ ಮತಕ್ಷೇತ್ರದಲ್ಲಿ ಇತ್ತೀಚೆಗೆ ಸುರಿದ ಸತತ ಮತ್ತು ಭಾರಿ ಮಳೆಗೆ ತೊಗರಿ ಬೆಳೆ ಹಾಳಾಗಿರುವ ರೈತರ ಹೊಲಗಳಿಗೆ ಭೇಟಿ ನೀಡಿ, ರೈತರಿಗೆ ಆತ್ಮ ಸ್ಥೈರ್ಯ ತುಂಬಿ ಮಾತನಾಡಿದರು.

ರೈತರು ತುಂಬಾ ಸಂಕಷ್ಟ ಎದುರಿಸುತ್ತಿದ್ದಾರೆ, ಸರ್ಕಾರ ರೈತರಿಗೆ ಧೈರ್ಯ ತುಂಬಿ ಈ ಕೂಡಲೇ ಪರಿಹಾರ ನೀಡಲು ಮುಂದಾಗಬೇಕು’ ಎಂದು ಅವರು ಒತ್ತಾಯಿಸಿದರು.

ಈ ವೇಳೆ, ಸಚಿನ್ ವಾಲಿ, ಸಿದ್ದು ಲೋಣಿ, ಸಾಗರ ಶಿಂಧೆ ಪ್ರವೀಣ ಪಾಟೀಲ ಚಂದು ಕಲ್ಮನಿ, ವಿನೋದ್ ದೇವರ, ಪ್ರಕಾಶ್ ಪಾಟೀಲ ದಯಾನಂದ ಕಟಗೇರಿ, ಸಿದ್ಧರಾಮ ಕೊಟ್ಟಲಗಿ, ಬಸವರಾಜ ಭಂಡರಕವಟೆ, ರಾಮ ಮೇತ್ರಿ, ಗುರುಸಿದ್ದಪ್ಪ ರಾ, ಸಾವಳಸಂಗ, ಮುದುಕು ಬಿರಾದಾರ ಸೇರಿದಂತೆ ಗ್ರಾಮಗಳ ರೈತರು ಇದ್ದರು.

ನಾವು ಸಾಲ ಮಾಡಿ ತೊಗರಿ, ಗೋವಿನ ಜೋಳ, ಹತ್ತಿ, ಉಳ್ಳಾಗಡ್ಡಿ, ಶೇಂಗಾ ಬೀಜ ತಂದು ಬಿತ್ತಿ ಗೊಬ್ಬರ ಹಾಕಿ ಬೆಳೆಗಳಿಗೆ ಖರ್ಚು ಮಾಡಿದ್ದೇವೆ.

ಈ ವರ್ಷ ಸತತ ಮತ್ತು ಭಾರಿ ಮಳೆಗೆ ಬೆಳೆಗಳು ನೀರು ಪಾಲಾಗಿ ಸಂಪೂರ್ಣ ಹಾಳಾಗಿವೆ.

ಸರ್ಕಾರ ಮತ್ತು ಜಿಲ್ಲಾಡಳಿತ ಹಾನಿಗೊಂಡ ನಾಗಠಾ ಣ ಮತಕ್ಷೇತ್ರದ ಎಲ್ಲ ರೈತರಿಗೆ ಕೂಡಲೇ ಪರಿಹಾರ ನೀಡಬೇಕು ಮತ್ತು ಮಳೆಗೆ ಮತಕ್ಷೇತ್ರದ ನಗರ–ಪಟ್ಟಣ ಮತ್ತು ಎಲ್ಲ ಗ್ರಾಮಗಳ ರಸ್ತೆಗಳು ಕೂಡಾ ಹದಗೆಟ್ಟಿವೆ ಈ ರಸ್ತೆಗಳ ದುರಸ್ತಿಗೆ ಕ್ರಮ ಕೈ ಗೊಳ್ಳಬೇಕು’ ಎಂದು ರೈತರಾದ ಸಚಿನ್ ವಾಲಿ ಮತ್ತು ಗುರುಸಿದ್ದಪ್ಪ ರಾ.ಸಾವಳಸಂಗ ಕೋರಿದರು.

ನಮ್ಮ ಈ ನಾಗಠಾಣ ಮತಕ್ಷೇತ್ರದ ಈ ಭಾಗವು ಮಳೆ ಆಶ್ರಿತ ಬೆಳೆಗಳನ್ನು ಬೆಳೆಯುವ ಪ್ರದೇಶವಾದ್ದರಿಂದ ಸಮರ್ಪಕವಾಗಿ ಮಳೆ ಆಗದೇ, ಮಳೆ ಕೈಕೊಟ್ಟು ಬೆಳೆ ಕೈಕೊಟ್ಟಿದೆ.

ಈ ಸಲ ಕೆರೆ ತುಂಬಿ ಬೆಳೆಗಳು ಚನ್ನಾಗಿ ಬರುತ್ತವೆ ಅಂತ ನಿರೀಕ್ಷೆ ಇಟ್ಟಿದ್ದೆವು.

ಮಳೆಗೆ ಎಲ್ಲ ಬೆಳೆಗಳು ಹೂವು, ಕಾಯಿ, ಆಗುವ ಮುನ್ನವೇ ನೀರಲ್ಲೇ ನಿಂತು,

ನೀರು ಪಾಲಾಗಿ ಕೈಗೆ ಬರುವ ಬೆಳೆಗಳು ಬಾರದೆ ಕೊಳೆತು ತುಂಬಾ ಹಾನಿ ಆಗಿದೆ’ ಎಂದು ರೈತರಾದ ಸಿದ್ದು ಲೋಣಿ ಮತ್ತು ಮುದುಕು ಬಿರಾದಾರ ಅವರು ಅಳಲು ತೋಡಿಕೊಂಡರು.

# ಕೋಟಿ ವೃಕ್ಷ ಅಭಿಯಾನದ ಫಲವಾಗಿ ಪರಿಸರದಲ್ಲಿ ಗಣನೀಯ ಬದಲಾವಣೆ: ಮಚಾಡೊ

**ವಿಜಯಪುರ :** ನೀರಾವರಿ ಮತ್ತು ಕೋಟಿ ವೃಕ್ಷ ಅಭಿಯಾನದ ಫಲವಾಗಿ ಜಿಲ್ಲೆಯ ಪರಿಸರದಲ್ಲಿ ಗಣನೀಯ ಬದಲಾವಣೆಯಾಗಿದೆ ಎಂದು ಬ್ರೆಜಿಲ್ ಸಾ ಪಾಲೊ ವಿಶ್ವವಿದ್ಯಾಲಯದ ಶರೀರ ಕ್ರಿಯಾ ಶಾಸ್ತ್ರ ವಿಭಾಗದ ಸಲಹೆಗಾರ ಮತ್ತು ವಿಜ್ಞಾನಿ ಬೆನೆಡಿಟೊ ಎಚ್. ಮಚಾಡೊ ಹೇಳಿದ್ದಾರೆ.



ಅಕ್ಟೋಬರ್ 6 ರಿಂದ ಅಕ್ಟೋಬರ್ 9ರ ವರೆಗೆ ನಗರಕ್ಕೆ ಭೇಟಿ ನೀಡಿದ ಅವರು, ತಮ್ಮ ಪತ್ನಿ ಮತ್ತು ಸಾ ಪಾಲೊ ವಿವಿಯ ಓಷಧ ರಸಾಯನಶಾಸ್ತ್ರ ವಿಭಾಗದ ನಿಕಟಪೂರ್ವ ಪ್ರಾಧ್ಯಾಪಕಿ ಪ್ರೊ. ಲೂಸಿಯಾನ್ ಎಂ. ಬೆನಧ್ಯಾಕ್ ಅವರೊಂದಿಗೆ ನಗರದ ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದ ನಾನಾ ವಿಭಾಗಗಳಲ್ಲಿ ನಡೆದ ವಿಚಾರ ವಿನಿಮಯ, ಸಂವಾದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡರು. ಶರೀರಕ್ರಿಯಾ ಶಾಸ್ತ್ರ ವಿಭಾಗಕ್ಕೆ ಭೇಟಿ ನೀಡಿದ ಅವರು, ಅಲ್ಲಿ ಪ್ರೊ. ಕುಸಾಲ ದಾಸ ಅವರು ಅವರ ಮಾರ್ಗದರ್ಶನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅತ್ಯಾಧುನಿಕ ಪ್ರಯೋಗಾಲಯದ ಬಗ್ಗೆ ಸಂತಸ ವ್ಯಕ್ತಪಡಿಸಿದರು. ಅಲ್ಲದೇ, ಮೆದುಳಿನ ನರ ಉಸಿರಾಟ ನಿಯಂತ್ರಣ ಕುರಿತು ಉಪನ್ಯಾಸ ನೀಡಿದರು. ಅಲ್ಲದೇ, ನಗರದ ನಾನಾ ಸ್ಥಳಗಳಿಗೆ ಭೇಟಿ ನೀಡಿದ ಅವರು, ಪುನಶ್ಚೇತನಗೊಳಿಸಲಾದ ಐತಿಹಾಸಿಕ ಬೇಗಂ ತಾಲಾಬ, ಕೆರೆಗೆ ನೀರು ತುಂಬಿಸುವ ಯೋಜನೆಯಡಿ ಭರ್ತಿಯಾಗಿರುವ ಭೂತನಾಳ ಕೆರೆ, ಕೋಟಿ ವೃಕ್ಷ ಅಭಿಯಾನದಡಿ ಮಾನವ ನಿರ್ಮಿತ ಕರಾಡ ದೊಡ್ಡಿ ಅರಣ್ಯ ಪ್ರದೇಶ ಸೇರಿದಂತೆ ನಾನಾ ಪ್ರದೇಶಗಳನ್ನು ವೀಕ್ಷಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ತಾವು 20 ವರ್ಷಗಳ ಹಿಂದೆ ನಗರಕ್ಕೆ ಮೊದಲ ಬಾರಿಗೆ ಬಂದಾಗ ಇಲ್ಲಿ ಬರ ಪರಿಸ್ಥಿತಿ ಇತ್ತು. ಅಂದಿನ ದಿನಗಳಿಗೆ ಹೋಲಿಸಿದರೆ ಈಗ ಅಮೂಲಾಗ್ರ ಬದಲಾವಣೆಯಾಗಿದೆ.

ಎಲ್ಲೆಡೆ ಹಸಿರಿನ ವಾತಾವರಣವಿದೆ. ಕೆರೆಗಳು ತುಂಬಿ ತುಳುಕುತ್ತಿವೆ. ಮಾನವ ನಿರ್ಮಿತ ಕಾಡುಗಳಲ್ಲಿ ಪ್ರಾಣಿ ಪಕ್ಷಿಗಳ ಕಲರವ ಸಂತಸ ತಂದಿದೆ. ಸಚಿವ ಎಂ. ಬಿ. ಪಾಟೀಲ ಅವರು ಕೈಗೊಂಡಿರುವ ಜಲಕ್ರಾಂತಿ ಮತ್ತು ಕೋಟಿ ವೃಕ್ಷ ಅಭಿಯಾನದ ಫಲ ಎಲ್ಲೆಡೆ ರಾರಾಜಿಸುತ್ತಿದೆ. ಇಂಥ ಸುಂದರ ಪರಿಸರ ಸರ್ವಾಂಗೀಣ ಅಭಿವೃದ್ಧಿಗೆ ಪ್ರೋತ್ಸಾಹ ನೀಡುತ್ತಿದೆ ಎಂದು ಹೇಳಿದರು.

ಈ ಅವಧಿಯಲ್ಲಿ ಅವರು ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದ ಸಹಕುಲಾಧಿಪತಿ ಡಾ. ವೈ. ಎಂ. ಜಯರಾಜ, ಕುಲಪತಿ ಡಾ. ಅರುಣ ಚಂ. ಇನಾಮದಾರ, ಪ್ರಭಾರ ಪ್ರಾಚಾರ್ಯೆ ಡಾ. ತೇಜಸ್ವಿನಿ ವಲ್ಲಭ, ಕುಲಸಚಿವ ಡಾ. ಆರ್. ವಿ. ಕುಲಕರ್ಣಿ, ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ರಾಜೇಶ ಹೊನ್ನುಟಗಿ, ಸೂಪರ್ ಸ್ಪೇಷಾಲಿಟಿ ಆಸ್ಪತ್ರೆಯ ನಿರ್ದೇಶಕ ಡಾ. ವಿಜಯಕುಮಾರ ಕಲ್ಯಾಣಪ್ಪಗೋಳ, ಅವರನ್ನು ಭೇಟಿ ಮಾಡಿ ಶೈಕ್ಷಣಿಕ ಮತ್ತು ಸಮಶೋಧನೆ ಕುರಿತು ವಿಚಾರ ವಿನಿಮಯ ನಡೆಸಿದರು. ಅಲ್ಲದೇ, ಬ್ರೆಜಿಲ್‌ನ ಸಾ ಪಾಲೊ ವಿವಿ ಮಧ್ಯೆ ಭವಿಷ್ಯದಲ್ಲಿ ಸಹಭಾಗಿತ್ವದ ಕುರಿತು ಚರ್ಚೆ ನಡೆಸಿದರು.

# ಸತ್ಯ ಮತ್ತು ಅಹಿಂಸೆ ಗಾಂಧೀಜಿ ಸಂದೇಶ : ಬಾಪುಗೌಡ ಪಾಟೀಲ

**ವಿಜಯಪುರ :** ಸತ್ಯ ಮತ್ತು ಅಹಿಂಸೆ ಒಂದೇ ನಾಣ್ಯದ ಎರಡು ಮುಖಗಳು ಎಂಬುದನ್ನು ಸಾಬೀತುಪಡಿಸಿ “ನನ್ನ ಜೀವನವೇ ನನ್ನ ಸಂದೇಶ” ಎಂಬ ಮಹಾತ್ಮಾ ಗಾಂಧೀಜಿಯವರ ಜೀವನದ ಸಂದೇಶಗಳನ್ನು ಯುವಪೀಳಿಗೆ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಅವರ ಜಯಂತಿಯನ್ನು ಅರ್ಥಪೂರ್ಣಗೊಳಿಸಬೇಕು ಎಂದು ರಾಜ್ಯ ಕರ್ನಾಟಕ ಖಾದಿ ಗ್ರಾಮೋದ್ಯೋಗ ಸಂಸ್ಥೆಯ ರಾಜ್ಯಾಧ್ಯಕ್ಷ ಬಾಪುಗೌಡ ಪಾಟೀಲ ಅಭಿಪ್ರಾಯ ವ್ಯಕ್ತಪಡಿಸಿದರು



ನಗರದ ಜಿಲ್ಲಾ ಪಂಚಾಯತ್ ರಸ್ತೆಯಲ್ಲಿರುವ ಗಾಂಧಿಭವನದಲ್ಲಿ ಜರುಗಿದ ಮಹಾತ್ಮಾ ಗಾಂಧೀಜಿ ದತ್ತಿ. ದತ್ತಿ ದಾನಿಗಳು: ಅಧ್ಯಕ್ಷರು ಕರ್ನಾಟಕ ಖಾದಿ ಗ್ರಾಮೋದ್ಯೋಗ ಸಂಸ್ಥೆ ಖಾಸಗೇರಿ ವಿಜಯಪುರ. ವಿಷಯ: ಮಹಾತ್ಮಾ ಗಾಂಧೀಜಿಯವರ ಕುರಿತು ಉಪನ್ಯಾಸ.

ಶ್ರೀ ಸಂಗಪ್ಪ ಮ ಕಮದಾಳ ದತ್ತಿ ದತ್ತಿದಾನಿಗಳು: ಶ್ರೀಮತಿ ಶಶಿಕಲಾ ಹುಡೇದ. ವಿಷಯ: ಕನಕದಾಸರ ಸಾಹಿತ್ಯದ ಪ್ರಚಾರ.

ಶ್ರೀ ಮುರಗೋಡ ಮಹಾದೇವರು ದತ್ತಿ ದತ್ತಿದಾನಿಗಳು: ಶ್ರೀ ಸ.ಸ ಗುರುಪುತ್ರಪ್ಪ ಗುರುಪಾದಪ್ಪ ಮುರಗೋಡ ಅಧ್ಯಕ್ಷರು, ಟ್ರಸ್ಟ ಕಮಿಟಿ ಶ್ರೀ ಕ್ಷೇತ್ರ ಇಂಚಗೇರಿ ಮಠ. ವಿಷಯ: ಸ್ವಾತಂತ್ರ್ಯ ಹೋರಾಟದಲ್ಲಿ ಶ್ರೀ ಇಂಚಗೇರಿ ಮಠದ ಪಾತ್ರ ಎಂಬ ವಿಶೇಷ ದತ್ತಿಗೋಷ್ಠಿಗಳನ್ನು ಉದ್ಘಾಟಿಸಿ ಮಾತನಾಡಿದ ಅವರು ಮಹಾತ್ಮಾ ಗಾಂಧೀಜಿಯವರ ಹೋರಾಟದ ಬದುಕು ಇಂದು ನಾವೆಲ್ಲ ಸ್ಮರಿಸಿಕೊಂಡು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಿಶ್ರಾಂತ ಅಧಿಕಾರಿ ವೀರಪ್ಪ ಹುಡೇದ ಮಾತನಾಡಿ ಇಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅತ್ಯಂತ ಕ್ರಿಯಾಶೀಲವಾಗಿ ದತ್ತಿಗೋಷ್ಠಿಗಳನ್ನು ಏರ್ಪಡಿಸಿ ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಮೂಲಕ ಜಿಲ್ಲೆಯ ಕೀರ್ತಿಯನ್ನು ಹೆಚ್ಚಿಸಿದೆ ಎಂದರು.

ಮಹಾತ್ಮಾ ಗಾಂಧೀಜಿಯವರ ಕುರಿತು ಶಿಕ್ಷಕ ಯಮನಪ್ಪ ಪವಾರ ವಿಶೇಷ ಉಪನ್ಯಾಸ ನೀಡುತ್ತಾ ಮಾನವೀಯತೆ ಮೂಲಕ ಜನರ ಮನಸ್ಸನ್ನು ಬೆಸೆದು ಬಾಂಧವ್ಯವನ್ನು ಗಟ್ಟಿಮಾಡುವ ಮೂಲಕ, ಅಸ್ಪ್ರಶ್ಯರ ಕುರಿತು ತಿಳುವಳಿಕೆ ಮೂಡಿಸುವ,

ದ. ಆಫ್ರಿಕಾದಲ್ಲಿರುವ ಭಾರತೀಯರಿಗೆ ರಕ್ಷಣೆ, ಸತ್ಯ ಮತ್ತು ಅಹಿಂಸೆಯ ಮೂಲಕ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಜಯ ದೊರಕಿಸಿಕೊಟ್ಟ ಶ್ರೇಯಸ್ಸು ಗಾಂಧೀಜಿಯವರಿಗೆ ಸಲ್ಲುತ್ತದೆ ಎಂದರು.

ಕನಕದಾಸರ ಸಾಹಿತ್ಯದ ಪ್ರಚಾರ ಕುರಿತು” ಉಪನ್ಯಾಸ ನೀಡಿ ಮಾತನಾಡಿದ ಶಿಕ್ಷಕಿ ಶರಣಮ್ಮ ಹಾದಿಮನಿ ಕನಕದಾಸರು ತಿಳಿಸಿಕೊಟ್ಟ ಭಕ್ತಿಯ ಮೂಲಕ ಮುಕ್ತಿ ಪಡೆಯುವ ಮಾರ್ಗವನ್ನು, ಕರ್ನಾಟಕ ಸಂಗೀತ ಪರಂಪರೆಯಲ್ಲಿ ಇವರೂ ಸಹ ಪುರಂದರದಾಸರೊಂದಿಗೆ ದಾಸ ಸಾಹಿತ್ಯದ ಅಶ್ವಿನಿ ದೇವತೆಗಳಲ್ಲಿ ಒಬ್ಬರಾಗಿದ್ದು ಕನ್ನಡಿಗರಾದ ನಮಗೆಲ್ಲ ಹೆಮ್ಮೆ ಎಂದರು.

ಸ್ವಾತಂತ್ರ್ಯ ಹೋರಾಟದಲ್ಲಿ ಶ್ರೀ ಇಂಚಗೇರಿ ಮಠದ ಪಾತ್ರ” ಎಂಬ ವಿಷಯದ ಕುರಿತು ಉಪನ್ಯಾಸ ನೀಡುತ್ತಾ ಶರಣ ಸಾಹಿತ್ಯದ ಚಿಂತಕ ಸಿದ್ದಲಿಂಗಪ್ಪ ಹದಿಮೂರ ಮಾತನಾಡಿ ಇಂಚಗೇರಿ ಮಠವು ಸ್ವಾತಂತ್ರ್ಯ ಹೋರಾಟದಲ್ಲಿ ಬ್ರಿಟಿಷ್ ಆಡಳಿತದ ವಿರುದ್ಧ ಹೋರಾಟ ನಡೆಸುವ ಮೂಲಕ ಇಪ್ಪತ್ತೈದು ಸಾವಿರಕ್ಕೂ ಹೆಚ್ಚು ಅಂತರ್ಜಾತೀಯ ಮತ್ತು ಅಂತರ್ಧರ್ಮೀಯ ವಿವಾಹಗಳನ್ನು ನಡೆಸುವ ಮೂಲಕ ಜಾತ್ಯತೀತ ಸಾಮರಸ್ಯದ ಮನೋಭಾವಕ್ಕೆ ಹೆಸರುವಾಸಿಯಾದ ಶ್ರೀ ಮಠದ ಮಾಧವಾನಂದ ಪ್ರಭೂಜಿ (ಮಹಾದೇವಪ್ಪ ಮುರಗೋಡ) ಯವರ ನೇತ್ರತ್ವದಲ್ಲಿ ಸಶಸ್ತ್ರ ಹೋರಾಟದಲ್ಲಿ ಇಂಚಗೇರಿ ಮಠದ ಅನನ್ಯ ಪಾತ್ರವನ್ನು ನಾವೆಲ್ಲರೂ ಸ್ಮರಿಸಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದ ವೇದಿಕೆಯಲ್ಲಿ ಮುಖ್ಯ ಅತಿಥಿಗಳಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರಿನ ಸದಸ್ಯೆ ದಾಕ್ಷಾಯಣಿ ಹುಡೇದ, ಅಮರೇಶ್ವರ ವಿ.ವಿ.ಸಂಘದ ಅಧ್ಯಕ್ಷ ಬಿ.ಎಸ್.ನವಲಿ, ಸಾಮಾಜಿಕ ಚಿಂತಕ ಇಸಾಕ ಪಠಾಣ ಉಪಸ್ಥಿತರಿದ್ದು ಮಾತನಾಡಿದರು

ಶಶಿಕಲಾ ನಾಯ್ಕೋಡಿ ಹಾಗೂ ಸುನಂದಾ ಕೋರಿ ಪ್ರಾರ್ಥಿಸಿದರು.

ಕಸಾಪ ಗೌರವ ಕಾರ್ಯದರ್ಶಿ ಡಾ. ಮಾಧವ ಗುಡಿ ಸ್ವಾಗತಿಸಿ ಗೌರವಿಸಿದರು. ಡಾ. ಆನಂದ ಕುಲಕರ್ಣಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ಶಲಾ ಬಳಗಾನೂರ ಕಾರ್ಯಕ್ರಮ ನಿರೂಪಿಸಿದರು.

ಶೋಭಾ ಬಡಿಗೇರ ವಂದಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲೀಕಾರ, ಗೌರವ ಕೋಶಾಧ್ಯಕ್ಷ ಅಭಿಷೇಕ ಚಕ್ರವರ್ತಿ, ಕಸಾಪ ಜಿಲ್ಲಾ ಪದಾಧಿಕಾರಿಗಳಾದ ಸುಖದೇವಿ ಅಲಬಾಳಮಠ, ಜಯಶ್ರೀ ಹಿರೇಮಠ, ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಶಿಕ್ಷಕ ಸಿ. ಎಸ್. ಕಣಕಾಲಮಠ ಸೇರಿದಂತೆ ಶ್ರೀ ಬಿ.ಎಂ. ಆಜೂರ, ಬಿ.ಕೆ. ಗೋಟ್ಯಾಳ, ಲತಾ ಗುಂಡಿ, ಗಂಗಮ್ಮ ರಡ್ಡಿ, ಮಹಾದೇವ ಮೋಪಗಾರ, ಕೆ. ಎಸ್ ಹಣಮಾಣಿ, ಜಿ. ಎಸ್ ಬಳ್ಳೂರ, ಶಿವಾಜಿ ಮೋರೆ, ರಾಜೇಶ್ವರಿ ಮೋಪಗಾರ, ಶಾಂತಾ ವಿಭೂತಿ,, ವಿಠ್ಠಲ ಶಿಂಧೆ, ಮೆಹತಾಬ ಕಾಗವಾಡ, ಸಾವಿತ್ರಿ ಪತ್ತಾರ, ಗುರಮ್ಮ ಹಿರೇಮಠ, ಆನಂದರಾವ ಕುಲಕರ್ಣಿ, ಸಿದ್ದಣ್ಣ ಸಾತಲಗಾಂವ, ಬಸವರಾಜ ನವಲಿ, ಪೀರಾಸಾಹೇಬ ವಾಲೀಕಾರ, ಅಶೋಕ ಕೂಬರಡ್ಡಿ, ಬಿ. ಆರ್ ಉಮೇಶ, ದಾಕ್ಷಾಯಣಿ ಬಿರಾದಾರ, ಎಮ್. ಎಚ್. ಪಠಾಣ, ಶಿವಲೀಲಾ ಹಿರೇಮಠ, ಎಸ್.ಜಿ. ಏಳಂಗಡಿ, ಶ್ರೀಮಂತ ಗೆಜ್ಜಿ, ನಿಶ್ಚಲ ಕರಡಿ, ಮಲ್ಲಿಕಾರ್ಜುನ ಕೆಳಗಡೆ, ಆರ್. ಎಸ್ ವಾಲೀಕಾರ, ಪಿ.ಸಿ.ಕವಟಗಿ, ಎಸ್. ಆರ್ ಬೀಳಗಿ, ಎನ್.ಎಸ್ ಬಿರಾದಾರ, ಎಂ.ಜಿ.ಕುಚಬಾಳ, ಶ್ರೀಕಾಂತ ನಾಡಗೌಡ, ಅಮೋಘಸಿದ್ಧ ಪೂಜಾರಿ, ಎಂ.ಬಿ.ಮಾಶೆಟ್ಟಿ, ಚಂದ್ರಶೇಖರ ಸರೂರ, ಎಸ್.ಎಂ.ಬಿರಾದಾರ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

# ಎಂ–ಕೋರ್ ಟೆಕ್ನಾಲಜಿ ತರಬೇತಿಗೆ 8 ವಿದ್ಯಾರ್ಥಿಗಳ ಆಯ್ಕೆ



**ವಿಜಯಪುರ:** ಬಿಎಲ್‌ಡಿಇ ಸಂಸ್ಥೆಯ ವಚನ ಪಿತಾಮಹ ಡಾ. ಪಿ.ಜಿ. ಹಳಕಟ್ಟಿ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಕಾಲೇಜಿನಲ್ಲಿ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ಕಾರ್ಯಕ್ರಮದ ಎಂಟು ವಿದ್ಯಾರ್ಥಿಗಳು ಬೆಂಗಳೂರಿನಲ್ಲಿರುವ ಎಂ–ಕೋರ್‌ಟೆಕ್ನಾಲಜಿಯಲ್ಲಿತರಬೇತಿಎಂಜಿನಿಯರ್‌ಗಳಾಗಿ ಆಯ್ಕೆಯಾಗಿದ್ದಾರೆ,

3.00 ಲಕ್ಷಗಳ ವಾರ್ಷಿಕ ಪ್ಯಾಕೇಜ್ ಪಡೆಯಲಿದ್ದಾರೆ. ಎಂ–ಕೋರ್ ಟೆಕ್ನಾಲಜೀಸ್ ವಿದ್ಯುತ್ ಮತ್ತು ಯಾಂತ್ರೀಕೃತ ವಲಯಗಳಲ್ಲಿ ಎಂಜಿನಿಯರಿಂಗ್, ಪರೀಕ್ಷೆ ಮತ್ತು ಕಮಿಷನಿಂಗ್ ಸೇವೆಗಳು ಮತ್ತು ಉತ್ಪನ್ನ ವ್ಯಾಪಾರದಲ್ಲಿ ಪರಿಣತಿ ಹೊಂದಿರುವ ವೇಗವಾಗಿ ಬೆಳೆಯುತ್ತಿರುವ ಕಂಪನಿಯಾಗಿದೆ. ಆಯ್ಕೆಯಾದ ವಿದ್ಯಾರ್ಥಿಗಳು ಲಕ್ಷ್ಮಣ್ ಎಸ್. ಕದಮ್, ದರ್ಶನ್ ವಾವಲ್,

ಸುದೀಪ್ ಗೊಲ್ಲಗಿ,

ಮನೋಜ್ ಬಿರಾದಾರ್, ಚೇತನ್ ಸತ್ಯನಾಯಕ್, ಮೇಘಾ ಹೊಸಮನಿ, ಐಶ್ವರ್ಯ ಬಗಲಿ ಮತ್ತು ಸಾಗರ್ ಪೂಜಾರಿ.

ಪ್ರಾಂಶುಪಾಲ ಡಾ. ಮಂಜುನಾಥ ಪಿ, ತರಬೇತಿ ಮತ್ತು ಉದ್ಯೋಗ ಅಧಿಕಾರಿ ಪ್ರೊ. ಪ್ರಶಾಂತ್ ಪಾಟೀಲ್, ಮತ್ತು ವಿಭಾಗದ ಮುಖ್ಯಸ್ಥ ಡಾ. ಎ.ಎಸ್. ಜಾಧವ್ ಮತ್ತು ಅಧ್ಯಾಪಕ ಸದಸ್ಯರು ಉತ್ತಮ ಕಂಪನಿಯಲ್ಲಿ ಸ್ಥಾನ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಿದರು.

# 26 ದಿನ ಪೂರೈಸಿದ ಕಾಲೇಜು ಹೋರಾಟ



**ವಿಜಯಪುರ :** ಜಿಲ್ಲೆಯ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಗಾಗಿ ನಡೆಯುತ್ತಿರುವ ಹೋರಾಟ ಭಾನುವಾರ 26ನೇ ದಿನ ಪೂರೈಸಿತು.

ಕರ್ನಾಟಕ ರಾಜ್ಯ ಮುಲ್ಲಾ ಅಸೋಷಿಯೇಷನ್ ಹಾಗೂ ಜಮಖಂಡಿ ಮಹಿಳಾ ಸಂಘಟನೆಗಳ ಒಕ್ಕೂಟ ಧರಣಿಯಲ್ಲಿ ಪಾಲ್ಗೊಂಡು, ಬೆಂಬಲ ವ್ಯಕ್ತಪಡಿಸಿದರು.

ಜಮಖಂಡಿಯ ಕಾರ್ಮೆಲ್ ಆಶಿಸ್ ಚಾರಿಟಬಲ್ ಟ್ರಸ್ಟ್ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಉನ್ನತಿ ಸ್ವ ಸಹಾಯ ಸಂಘ, ಕೀರ್ತಿ ಸ್ವ ಸಹಾಯ ಸಂಘ, ವಿಜಯಲಕ್ಷ್ಮೀ ಸ್ವ ಸಹಾಯ ಸಂಘ, ಸಂವಿಧಾನ ಶಿಲ್ಪಿ ಭೀಮರಾವ್ ಸ್ವ ಸಹಾಯ ಸಂಘ, ಹೊಸಬೆಳಕು ಸ್ವ ಸಹಾಯ ಸಂಘ, ದುರ್ಗಾದೇವಿ ಸ್ವ ಸಹಾಯ ಸಂಘ, ಪ್ರಗತಿ ಸ್ವ ಸಹಾಯ ಸಂಘ, ಸಾವಿತ್ರಿಬಾಯಿ ಪುಲೆ ಸ್ವ ಸಹಾಯಸಂಘಪದಾಧಿಕಾರಿಗಳು,ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪಿಸುವಂತೆ ಒತ್ತಾಯಿಸಿದರು.

ಕಾರ್ಮೆಲ್ ಆಶಿಸ್ ಚಾರಿಟೇಬಲ್ ಟ್ರಸ್ಟಿನ ಯೋಜನಾ ಸಂಯೋಜಕ ಜಯಾ ರಾಜು ಪಿಳ್ಳೈ ಮಾತನಾಡಿ, ಸರ್ಕಾರ ಏಕೆ ವಿಜಯಪುರಕ್ಕೆ ಅನ್ಯಾಯ ಮಾಡ್ತಾ ಇದೆ ತಿಳಿಯುತ್ತಿಲ್ಲ. ಎಲ್ಲಾ ಶಾಸಕರು ಒಂದಾಗಿ ಸರ್ಕಾರಕ್ಕೆ ಮನವರಿಕೆ ಮಾಡಿ ಆದಷ್ಟು ಬೇಗ ಸರ್ಕಾರಿ ವೈದ್ಯಕೀಯ ಕಾಲೇಜು ವಿಜಯಪುರದಲ್ಲಿ ಪ್ರಾರಂಭಿಸಬೇಕು ಎಂದು ಅವರು ಆಗ್ರಹಿಸಿದರು.


ಟ್ರಸ್ಟಿನ ಸಂಯೋಜಕ ಸುಮಿತ್ರಾ ಬೋರಗಿ ಮಾತನಾಡಿ, ಜಮಖಂಡಿಯಿಂದ ಕೂಡ ಜನರು ವಿಜಯಪುರ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಾರೆ. ಇಷ್ಟು ಸುಸಜ್ಜಿತವಾದ 150 ಎಕರೆ ಇರುವಂತ ಜಿಲ್ಲಾ ಆಸ್ಪತ್ರೆ ಇರುವಾಗ ಯಾಕೆ ನೀವು ಖಾಸಗಿ–ಸಹಭಾಗಿತ್ವದಲ್ಲಿ ವೈದ್ಯಕೀಯ ಕಾಲೇಜು ತರುತ್ತಿದ್ದೀರಾ ಎಂದು ಪ್ರಶ್ನೆ ಮಾಡಿದರು.

ಕರ್ನಾಟಕ ರಾಜ್ಯ ಮುಲ್ಲಾ ಅಸೋಷಿಯೇಶನ್ ರಾಜ್ಯ ಉಪಾಧ್ಯಕ್ಷ ಇಮ್ತಿಯಾಜ್ ಮುಲ್ಲಾ ಮಾತನಾಡಿ, ಜಿಲ್ಲಾ ಉಸ್ತುವಾರಿ ಎಂ.ಬಿ.ಪಾಟೀಲರು ಇದನ್ನ ಗಂಭೀರವಾಗಿ ಪರಿಗಣಿಸಿ ವಿಜಯಪುರಕ್ಕೆ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆ ಮಾಡುವಲ್ಲಿ ಮುತುವರ್ಜಿ ವಹಿಸಬೇಕು ಎಂದು ಹೇಳಿದರು.

ಜಮಖಂಡಿಯ ಕಾರ್ಮೆಲ್ ಚಾರಿಟಬಲ್ ಟ್ರಸ್ಟಿನ ಜಯಾ ರಾಜು ಪಿಳ್ಳೈ, ಸುಮಿತ್ರಾ ಬೋರಗಿ, ವಿದ್ಯಾಶ್ರೀ ಕಾಂಬ್ಳೆ, ಸುವರ್ಣ ಹರಿಜನ, ಲಲಿತಾ ಕಡಿಯಪ್ಪ, ಕಸ್ತೂರಿ ಕಾಂಬ್ಳೆ, ಶಶಿಕಲಾ ಕಾಂಬ್ಳೆ, ಪ್ರೀತಿ ಕಾಂಬ್ಳೆ, ರುಕ್ಮಿಣಿ ಕಾಂಬ್ಳೆ, ರೂಪಾ ಕಾಂಬ್ಳೆ, ಗೀತಾ ಕಾಂಬ್ಳೆ, ಸರಸ್ವತಿ ಕಾಂಬ್ಳೆ, ಪುಲಾಬಾಯಿ ಮಾದರ, ಶಂಬಲಾ ಮಾದರ, ಮಂಗಳಾ ಕಾಂಬ್ಳೆ, ಗೀತಾ ಕಾಂಬ್ಳೆ, ಸುಮವ್ವಾ ಕಾಂಬ್ಳೆ, ರಾಜಶ್ರೀ ಮಗಾಡಿ, ನಿಂಗವ್ವ ಸಿಂಗಿ, ರಾಜಶ್ರೀ ಕಾಗಿ, ತೇಜಸ್ವಿನಿ ಕಾಂಬ್ಳೆ,

ಸುನಿತಾ ಕಾಂಬ್ಳೆ, ಸುನಿಲ್ ಕಾಂಬ್ಳೆ, ಇಮ್ತಿಯಾಜ್ ಮುಲ್ಲಾ, ಅಬೂಬಕರ್ ಮುಲ್ಲಾ, ಬಂದೆ ನವಾಜ್ ಮುಲ್ಲಾ, ಇಮಾಂಸಾಬ್ ಮುಲ್ಲಾ, ನಬಿಸಾಬ್ ಮುಲ್ಲಾ, ರಿಜ್ವಾನ್ ಅಹ್ಮದ್, ಮೊಹಮ್ಮದ್ ಯೂಸುಫ್ ಮುಲ್ಲಾ, ರಫೀಕ್ ಮುಲ್ಲಾ, ಐ.ಎಂ. ಮುಲ್ಲಾ, ಎ. ಎಂ.ಮುಲ್ಲಾ ಇದ್ದರು.

# ಆಧ್ಯಾತ್ಮ ಸಾಧನೆಯಿಂದ ಹೃದಯ ಪರಿವರ್ತನೆ ಸಾಧ್ಯ: ಶಿವಕುಮಾರ ಸ್ವಾಮೀಜಿ




**ಇಂಡಿ :** ಸಾಧುಸಂತರ ಸಂಗ, ವೇದಾಂತ, ಆಧ್ಯಾತ್ಮ ಸಾಧನೆಗಳಿಂದ ಹೃದಯ ಪರಿವರ್ತನೆ ಸಾಧ್ಯ ಎಂದು ಬೀದರದ ಚಿದಂಬರಾಶ್ರಮದ ಶಿವಕುಮಾರ ಸ್ವಾಮೀಜಿ ಹೇಳಿದರು.

ಅವರುಶನಿವಾರಸಂಜೆತಾಲ್ಲೂಕಿನ ಆಳೂರ ಗ್ರಾಮದಲ್ಲಿ ನಡೆದ ಸಿದ್ಧಾರೂಢರನೂತನಮಂದಿರದ ಕಳಸಾರೋಹಣ ಹಾಗೂ ಲಕ್ಷ್ಮೀಬಾಯಿ ತಾಯಿಯವರ, ಪಾರ್ವತೆಮ್ಮನವರ ಮೂರ್ತಿ ಪ್ರಾಣಪ್ರತಿಷ್ಠಾಪನೆ ಹಾಗೂ 55ನೇ ವರ್ಷದ ಆಧ್ಯಾತ್ಮಿಕ ಪ್ರವಚನ ಮಹೋತ್ಸವದಲ್ಲಿ ಭಾಗವಹಿಸಿ ಆಶೀರ್ವಚನ ನೀಡಿದರು.

ಸಾನ್ನಿಧ್ಯವಹಿಸಿದ್ದ ಇಂಚಲಮಠದ ಪೀಠಾಧ್ಯಕ್ಷ ಸದ್ಗುರು ಶಿವಾನಂದ ಭಾರತಿ ಸ್ವಾಮೀಜಿ ಆಶೀರ್ವಚನ ನೀಡಿ, ಪರಮಾತ್ಮ ಮತ್ತು ನಮ್ಮ ಸಂಬಂಧದಸಾಕ್ಷಾತ್ಕಾರವೇಜ್ಞಾನ. ಆಧ್ಯಾತ್ಮದಿಂದ ಸ್ವರ್ಗ ಸೃಷ್ಟಿಸುವ ಸಾಮರ್ಥ್ಯ ಮಹಾತ್ಮನಲ್ಲಿದೆ ಎಂದು ಹೇಳಿದರು.

ಹುಬ್ಬಳ್ಳಿ–ವಿಜಯಪುರದ ಷಣ್ಮುಖಾರೂಢ ಮಠದ ಅಭಿನವ ಸಿದ್ಧಾರೂಢ ಸ್ವಾಮೀಜಿ ಮಾತನಾಡಿ,ಪ್ರತಿಯೊಬ್ಬರಲ್ಲಿರುವ ಆತ್ಮಚೈತನ್ಯವು ಇಡೀ ಬ್ರಹ್ಮಾಂಡವನ್ನು ವ್ಯಾಪಿಸಿದೆ. ಕಣ್ಣಿಗೆ ಕಾಣುವುದೆಲ್ಲ ಸತ್ಯವಲ್ಲ. ಅದು ಸುಳ್ಳಾಗಿರಬಹುದು.

ಈ ಮಿಥ್ಯೆಯನ್ನು ಅರಿತು ಆತ್ಮಚೈತನ್ಯದೆಡೆ ಹೊರಳುವುದೇ ಸತ್ಯದ ಹಾದಿ ಎಂದು ವೇದಾಂತ ಹೇಳುತ್ತದೆ.

ಆತ್ಮಚೈತನ್ಯ ಸಾಮಾನ್ಯ ದೃಷ್ಟಿಗೆ ಕಾಣುವುದಿಲ್ಲ. ಅದನ್ನು ಕಾಣಲು ಗುರುಕೃಪೆ, ದೈವಕೃಪೆ ಬೇಕು. ಅದಕ್ಕೆ ಸಿದ್ಧಾರೂಢರಂಥ ಮಹಾತ್ಮರ ಮಾರ್ಗದರ್ಶನ ಅಗತ್ಯ ಎಂದರು.

ವಿಜಯಪುರದ ಜ್ಞಾನಯೋಗಾಶ್ರಮದ ಬಸವಲಿಂಗ ಸ್ವಾಮೀಜಿ, ಕಲಬುಗಿಯ ಲಕ್ಷ್ಮೀದೇವಿ ತಾಯಿಯವರು, ಮುಚಳಂಬ ನಾಗಭೂಶಣ ಮಠದ ಪ್ರಷಣಾನಂದ ಸ್ವಾಮೀಜಿ ಆಶೀರ್ವಚನ ನೀಡಿದರು.

ವೇದಿಕೆಯಲ್ಲಿ ಬಂಥನಾಳದ ವೃಷಬಲಿಂಗ ಮಹಾಶಿವಯೋಗಿಗಳು, ಗೋಳಸಾರದ ಅಭಿನವ ಪುಂಡಲಿಂಗ ಮಹಾಸ್ವಾಮಿಗಳು, ಪಾನ ಮಂಗಳೂರಿನ ಶಿವಾನಂದ ಶಿವಾಚಾರ್ಯರು, ಬೀದರ ಶಶಿಕಲಾ ತಾಯಿಯವರು, ಆಳೂರ ಮಠದ ಶಂಕರಾನಂದ ಮಹಾಸ್ವಾಮಿಗಳು, ಶಿವೂರ ಗಂಗಾಧರ ಸ್ವಾಮಿಗಳು, ಸೋಲಾಪುರದ ಶಿವಪುತ್ರ ಮಹಾಸ್ವಾಮಿಗಳು,ಸೈದಾಪೂರದ ವಿದ್ಯಾದೇವಿ ತಾಯಿಯವರು, ಗದಗದ ಪರಿಪೂರ್ಣ ಆನಂದ ಭಾರತಿ ಶ್ರೀಗಳು ಇದ್ದರು.

# ನಾಗಠಾಣದಲ್ಲಿ ಅಂತಾರಾಷ್ಟ್ರೀಯ ಹೆಣ್ಣು ಮಗುವಿನ ದಿನ ಆಚರಣೆ



**ವಿಜಯಪುರ :** ಅಂತಾರಾಷ್ಟ್ರೀಯ ಹೆಣ್ಣು ಮಗುವಿನ ದಿನ. ಈ ನಿಮಿತ್ತ ತಾಲೂಕಿನ ನಾಗಠಾಣ ಗ್ರಾಮದ ಹೆಣ್ಣುಮಕ್ಕಳಾದಅನುಶ್ರೀ–ಶ್ರೀನಿಧಿ ಬಂಡೆ, ಸಮೃದ್ಧಿ–ದೀಪಾ, ಭಾಗ್ಯ–ಸನ್ನಿಧಿ ಅವರು ಪರಸ್ಪರ ಸಿಹಿ ಹಂಚಿಕೊಂಡು ಅಂತಾರಾಷ್ಟ್ರೀಯ ಹೆಣ್ಣು ಮಗುವಿನ ದಿನವನ್ನು ಆಚರಿಸಿದರು.

ಹೆಣ್ಣು ಎಂದರೆ ಮನೆಯ ಬೆಳಕು. ಹುಟ್ಟಿನಿಂದ ಸಾಯುವ ತನಕ ವಿವಿಧ ಪಾತ್ರಗಳನ್ನು ಸಮರ್ಥವಾಗಿ ನಿಭಾಯಿಸಿಕೊಂಡು ಹೋಗುವವಳು. ಜಗದ ಸೃಷ್ಟಿಕರ್ತೆಯೇ ಅವಳಾಗಿರುವಾಗ ಆಕೆ ಇಲ್ಲದೆ ಜೀವಿಸುವುದು ಕಷ್ಟದಾಯಕ. ಇಂದಿನ ದಿನಗಳಲ್ಲಿ ಹೆಣ್ಣು ಮಕ್ಕಳು ವಿವಿಧ ಕ್ಷೇತ್ರದಲ್ಲಿ ಸಾಧನೆಗೈದು ಮಾದರಿಯಾಗಿದ್ದಾರೆ.

ಅಂತಾರಾಷ್ಟ್ರೀಯ ಹೆಣ್ಣು ಮಕ್ಕಳ ದಿನವನ್ನು ಬಾಲ್ಯವಿವಾಹ, ಶಿಕ್ಷಣ, ತಾರತಮ್ಯ ಮತ್ತು ಹಿಂಸೆ, ಲಿಂಗ ಆಧಾರಿತ ಅಸಮಾನತೆ, ಹೆಣ್ಣು ಮಕ್ಕಳ ಹಕ್ಕುಗಳು, ಹೆಣ್ಣು ಮಕ್ಕಳಿಗೆ ಸಮಾನ ಗೌರವ ಮತ್ತು ಹಕ್ಕುಗಳನ್ನು ನೀಡಲು, ಸುರಕ್ಷತೆ ಮತ್ತು ಸಮಾನತೆಯ ಬಗ್ಗೆ ಅವರಿಗೆ ಅರಿವು ಮೂಡಿಸುವ ಉದ್ದೇಶದಿಂದ ಈ ದಿನವನ್ನು ಆಚರಿಸಲಾಗುತ್ತದೆ.

# ಶೂ ಎಸೆತ ನಾಗರಿಕ ಸಮಾಜ ತಲೆ ತಗ್ಗಿಸುವಂತಹ ಘಟನೆಯಾಗಿದೆ



**ಜಮಖಂಡಿ :** ನಗರದ ಎ.ಜಿ.ದೇಸಾಯಿ ವೃತ್ತದಲ್ಲಿ ಬುಧವಾರ ಸುಪ್ರೀಂ ಕೋರ್ಟಿನ ಕಲಾಪದಲ್ಲಿ ಮುಖ್ಯ ನ್ಯಾಯ ಮೂರ್ತಿ ಬಿ.ಆರ್.ಗವಾಯಿ ಅವರ ಮೇಲೆ ಶೂ ಎಸೆದ ಕೃತ್ಯ ಖಂಡಿಸಿ ಬೃಹತ್ ಪ್ರತಿಭಟನೆಯೊಂದಿಗೆ ದಲಿತ ಸಂಘರ್ಷ ಸಮಿತಿ ಪದಾಧಿಕಾರಿಗಳು ಜಿಲ್ಲಾ ಉಸ್ತುವಾರಿ ಸಚಿವ ಆರ್. ಬಿ. ತಿಮ್ಮಾಪೂರ ಅವರಿಗೆ ಮನವಿ ಸಲ್ಲಿಸಿದರು.

ನಂತರ ಪ್ರಮುಖರು ಮಾತನಾಡಿ, ಸುಪ್ರೀಂಕೋರ್ಟ ಕಲಾಪದ ಸಂದರ್ಭದಲ್ಲಿ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರತ್ತ ಶೂ ಎಸೆದು ಇಡೀ ನಾಗರಿಕ ಸಮಾಜ ತಲೆ ತಗ್ಗಿಸುವಂತಹ ಹೀನ ಕೃತ್ಯ ನಡೆದಿದೆ. ಇದು ದೇಶದ ಇತಿಹಾಸದಲ್ಲಿ ಮೊಟ್ಟಮೊದಲ ಘಟನೆಯಾಗಿದೆ. ಸುಪ್ರೀಂಕೋರ್ಟ ಮುಖ್ಯ ನ್ಯಾಯಮೂರ್ತಿಗೆ ಇದ–ರಿಂದ ಅವಮಾನವಾಗಿದೆ. ಇದರ ಹಿಂದಿನ ದಿನಗಳಲ್ಲಿ ಆರ್.ಎಸ್.ಎಸ್. ನ ನೂರು ವರ್ಷದ ಸಂಭ್ರಮಾಚರಣೆ ಸಂದರ್ಭದಲ್ಲಿ ನಾಗಪೂರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಆರ್. ಎಸ್.ಎಸ್. ಮುಖ್ಯಸ್ಥ ಮೋಹನ ಭಾಗವತರು ಪಾಕಿಸ್ತಾನ ಮತ್ತು ನೇಪಾಳದಂತೆ ಜನರು ದಂಗೆ ಏಳುವ ಸಮಯ ದೂರವಿಲ್ಲ ಎಂದು ಹೇಳಿದ್ದರು. ಇದಕ್ಕೆ ಪುಷ್ಟಿ ನೀಡುವಂತೆ ಬಿ.ಆರ್.ಗವಾಯಿ ಮೇಲೆ ನಡೆದ ಹೀನಕೃತ್ಯ ನೋಡಿದರೆ ಬಹುಶಃ ಈ ದೇಶದಲ್ಲಿ ಸಂವಿಧಾನದಿಂದ ಅಸ್ಪೃಶ್ಯರು ಉನ್ನತ ಹುದ್ದೆಯಲ್ಲಿ ಇರುವ ಬಗ್ಗೆ ಅಸಹಿಷ್ಣುತೆ ಹೇಳಿಕೆ ಇರಬಹುದು. ರಾಷ್ಟ್ರಪತಿಗಳು ಮಧ್ಯೆ ಪ್ರವೇಶಿಸಿ ಹೀನಕೃತ್ಯ ಎಸಗಿದ ವ್ಯಕ್ತಿ ವಿರುದ್ಧ ಸ್ವಯಂ ಪ್ರೇರಿತ ದೇಶದ್ರೋಹ ಪ್ರಕರಣ ದಾಖಲಿಸಿಕೊಂಡು ತನಿಖೆಗೆ ಆದೇಶ ನೀಡಬೇಕು ಎಂದರು.

ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ಸಾಗರ ಬಣ) ನೇತೃತ್ವದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಆರ್. ಬಿ. ತಿಮ್ಮಾಪೂರ ಅವರಿಗೆ ಈ ಘಟನೆ ಹಿಂದೆ ಯಾರಿದ್ದಾರೆ ಅವರನ್ನು ಗುರುತಿಸಿ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ರಾಜ್ಯ ದಲಿತ ಸಂಘರ್ಷ ಸಮಿತಿ (ಸಾಗರ ಬಣ) ಜಿಲ್ಲಾ ಸಂಚಾಲಕ ಪರಶುರಾಮ ಕಾಂಬಳೆ ಅವರ ನೇತೃತ್ವದಲ್ಲಿ ತಹಶೀಲ್ದಾರರ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಬಸವ ಕೇಂದ್ರ ಅಧ್ಯಕ್ಷ ರವಿ ಯಡಹಳ್ಳಿ, ನ್ಯಾಯವಾದಿ ಎಸ್. ಪಿ. ದೊಡಮನಿ,

ಶರಣಕುಮಾರ ಕಂಬಾಗಿ, ಅಶೋಕ ಕಾಂಬಳೆ, ಅಂಬೇಡ್ಕರ ಸೇನೆ ಜಿಲ್ಲಾಧ್ಯಕ್ಷ ಸೂರಜ ಕುಡ್ರಾಣಿ, ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಕುಮಾರ ಆಲಗೂರ, ಡಿಎಸ್‌ಎಸ್ ಅಂಬೇಡ್ಕರವಾದ ಪದಾಧಿಕಾರಿಗಳಾದ ಸಂಗಮೇಶ ಕಾಂಬಳೆ, ಸದಾಶಿವ ಐನಾಪುರ, ಬಸವರಾಜ ದೊಡಮನಿ, ಪರಸು ಕಾಂಬಳೆ, ಶಶಿಕಾಂತ ದೊಡಮನಿ, ಅಮಿತ ಸೂರಗೊಂಡ ಸಹಿತ ದಲಿತ ಸಂಘರ್ಷ ಸಮಿತಿ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

# ಕುಸ್ತಿ ಸ್ಪರ್ದೆಯಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆ; ಸನ್ಮಾನ



**ಚಿಮ್ಮಡ :** ಗ್ರಾಮದ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿವ್ಯಾಸಂಗಮಾಡುತ್ತಿರುವವಿದ್ಯಾರ್ಥಿಗಳು ಜಿಲ್ಲಾಮಟ್ಟದ ಕುಸ್ತಿ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥ–'ಮ ಸ್ಥಾನ ಪಡೆಯುವ ಮೂಲಕ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಬಾಗಲಕೋಟೆಯ ನವನಗರದ ಎಸ್. ಬಿ. ಪಾಟೀಲ ಪದವಿ ಪೂರ್ವ ಕಾಲೇಜನಲ್ಲಿ ನಡೆದ 2025–26 ನೇ ಸಾಲಿನ ಪದವಿ ಪೂರ್ವ ಕಾಲೇಜುಗಳ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಬಾಲಕರ ವಿಭಾಗದ 57 ಕೆ. ಜಿ. ಕುಸ್ತಿ ಸ್ಪರ್ಧೆಯಲ್ಲಿ ಚಿಮ್ಮಡ ಗ್ರಾಮದ ಸರಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ಕುಮಾರ ಅಭಿಷೇಕ ಮಾಳಪ್ಪ ತಿಮ್ಮಾಪೂರ ಹಾಗೂ ಬಾಲಕಿಯರ 62 ಕೆ. ಜಿ. ಕುಸ್ತಿ ವಿಭಾಗದಲ್ಲಿ ಕುಮಾರಿ ಪ್ರೇಮಾ ಮಹಾದೇವ ಕುಂಬಾರ ಪ್ರಥಮ ಸ್ಥಾನ ಪಡೆಯುವ ಮೂಲಕ ಇಬ್ಬರೂ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ರಾಜ್ಯಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗುವ ಮೂಲಕ ಗ್ರಾಮಕ್ಕೆ ಕೀರ್ತಿ ತಂದ ವಿದ್ಯಾರ್ಥಿಗಳನ್ನು ಹಾಗೂ ಕ್ರೀಡಾ ವಿಭಾಗದ ಮುಖ್ಯಸ್ಥರಾದ ಡಾ. ಎಚ್. ಎಂ. ಕುಂಬಾರರನ್ನು ಪದವಿ ಪೂರ್ವ ಕಾಲೇಜು ಅಭಿವೃದ್ಧಿ ಸಮಿತಿಯಿಂದ ಶನಿವಾರದಂದು ಸತ್ಕರಿಸಿ ಗೌರವಿಸಲಾಯಿತು.

ಸರಕಾರಿ ಪದವಿ ಪೂರ್ವ ಕಾಲೇಜಿನ ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಬಸವರಾಜ ಕುಂಚನೂರ, ಉಪಾಧ್ಯಕ್ಷ ಅವ್ವಣ್ಣಪ್ಪ ಮುಗಳಖೋಡ, ಪ್ರಾಚಾರ್ಯರಾದ ಶ್ರೀಮತಿ ಎಸ್. ಕೆ. ರಾಠೋಡ, ಸದ್ಯಸರಾದ ಪರಪ್ಪ ಪಾಲಭಾಂವಿ, ಕಾಳಪ್ಪ ಬಡಿಗೇರ, ಶಂಕರ ಬಿಳ್ಳೂರ, ಉಪನ್ಯಾಸಕರಾದ ಪ್ರೊ. ಬಿ. ಬಿ. ಕುದರಿಮನಿ, ಶ್ರೀಮತಿ ಪಿ. ಪಿ. ವಸ್ತ್ರದ, ಪ್ರವೀಣ ಮೈತ್ರಿ, ಸಿದ್ದು ಸಂಗಮ್ಮನವರ ಸೇರಿದಂತೆ ಹಲವಾರು ಜನ ಪ್ರಮುಖರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ರಾಜ್ಯ ಸರಕಾರ ಪ್ರತಿ ಎಕರೆಗೆ 50 ಲಕ್ಷ ರೂ. ನಿಗದಿಪಡಿಸಲು ಒತ್ತಾಯ

**ಜಮಖಂಡಿ :** ರಾಜ್ಯ ಸರಕಾರ ಸಂಪುಟ ಸಭೆಯಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಮುಳುಗಡೆಯಾಗಲಿರುವ ಜಮೀನುಗಳಿಗೆ ದರ ನಿಗದಿ ಮಾಡಿರುವ ನಿರ್ಧಾರವನ್ನು ಸ್ವಾಗತಿಸುತ್ತೇವೆಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ತಾಲೂಕಾಧ್ಯಕ್ಷ ಹಣಮಂತ ಮಗದುಮ್ ಹೇಳಿದರು.

ನಗರದಲ್ಲಿ ರವಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನೀರಾವರಿ ಜಮೀನಿಗೆ 40 ಲಕ್ಷ ರೂ. ಮತ್ತು ಒಣ ಬೇಸಾಯ ಜಮೀನಿಗೆ 30 ಲಕ್ಷ ರೂ. ದರ ನಿಗದಿ ಮಾಡಿದ್ದು ಅದು ತೀರ ಕಡಿಮೆಯಾಗಲಿದೆ. ಪ್ರತಿ ಎಕರೆಗೆ ನೀರಾವರಿ ಜಮೀನಿಗೆ 50 ಲಕ್ಷ ರೂ. ಮತ್ತು ಒಣ ಬೇಸಾಯ ಜಮೀನಿಗೆ 40 ಲಕ್ಷ ರೂ. ಪರಿಹಾರ ನೀಡಿದಲ್ಲಿ, ರೈತರು ನೆಮ್ಮದಿಯಾಗಿ ಜೀವನವನ್ನು ನಡೆಸಲು ಸಾಧ್ಯವಿದೆ ಎಂದರು.

ಬೇರೆ ಜಿಲ್ಲೆಗಳ ತಾಲೂಕಿನಲ್ಲಿ ಕೂಡ ರೈತರ ಜಮೀನಿನ ದರಗಳು ಬಹಳಷ್ಟು ಹೆಚ್ಚಾಗಿದ್ದರಿಂದ ನಾವುಗಳು ಮುಳುಗಡೆಯಾದ ಜಮೀನಿನ ರೈತರು ಕೇವಲ ಅರ್ಧದಷ್ಟು ಜಮೀನು ಖರೀದಿಸಲು ಸಾಧ್ಯವಾಗಲಿದೆ. ನಮ್ಮ ಭಾಗದ ರೈತರು ನೂರಾರು ವರ್ಷಗಳಿಂದ ತಮ್ಮ ಜಮೀನಿನೊಂದಿಗೆ ಭಾವನಾತ್ಮಕ ಸಂಬಂಧ ಹೊಂದಿದ್ದು, ಜಮೀನು ಕಳೆದುಕೊಳ್ಳುವ ರೈತರು ನೋವಿನಿಂದ ಬಳಲುವ ಸ್ಥಿತಿಯನ್ನು ಸರಕಾರ ನಿರ್ಮಿಸಬಾರದು.

ರಾಜ್ಯ ಸರಕಾರ ಮೂರು ಕಂತುಗಳಲ್ಲಿ ಹಣ ನೀಡುವ ಬದಲಾಗಿ ಒಂದೇ ಸಲದಲ್ಲಿ ರೈತರಿಗೆ ಸರಕಾರ ಭೂ ಪರಿಹಾರ ನೀಡಿದಲ್ಲಿ, ರೈತರು ಬೇರೆ ಪ್ರದೇಶದಲ್ಲಿ ಜಮೀನು ಖರೀದಿ ಮಾಡುವುದಕ್ಕೆ ಅವಕಾಶಗಳು ಹೆಚ್ಚಾಗುತ್ತದೆ ಎಂದರು.

ಬೇರೆ ಪ್ರದೇಶದಲ್ಲಿ ಖರೀದಿಸುವ ಸಂದರ್ಭದಲ್ಲಿ ಆ ಜಮೀನುಗಳ ಮಾಲಿಕರಿಗೆ ಪೂರ್ತಿಯಾಗಿ ಹಣ ಪಾವತಿಸುವ ಹಿನ್ನೆಲೆಯಲ್ಲಿ ಮುಳುಗಡೆ ರೈತರು ತೀವ್ರ ಆರ್ಥಿಕ ತೊಂದರೆ ಅನುಭವಿಸಬೇಕಾಗುತ್ತದೆ. ಸರಕಾರ ಒಂದೇ ಸೂರಿನಲ್ಲಿ ಭೂ ಪರಿಹಾರ ಪಾವತಿಸಿದಲ್ಲಿ ರೈತರು ಹೊಸ ಜಮೀನಗಳ ಖರೀದಿಗೆ ಅನುಕೂಲವಾಗಲಿದೆ. ಜಮೀನು ಖರೀದಿಸಿದ ಆ ಪ್ರದೇಶದಲ್ಲಿ ಸಂಪೂರ್ಣವಾಗಿ ಕುಟುಂಬಗಳು ಜೀವನ ಸಾಗಿಸಲು ಅನಕೂಲವಾಗಲಿದೆ. ಮುಳುಗಡೆ ರೈತರು ಅಲ್ಲಿಯೇ ಹೊಸ ಜೀವನ ಸಾಗಿಸುವ ಮೂಲಕ ಶಾಶ್ವತ ನೆಲೆಯನ್ನು ಕಂಡುಕೊಳ್ಳುವ ಸಾಧ್ಯತೆ ಹೆಚ್ಚಾಗಿದೆ ಎಂದರು.

ರಾಜ್ಯ ಸರಕಾರ ಸಾಲವನ್ನಾದರೂ ಮಾಡಿ ರೈತ–ರಿಗೆ ಒಂದೇ ಸೂರಿನಲ್ಲಿ ಭೂ ಪರಿಹಾರ ನೀಡುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ರಾಜ್ಯದ ರೈತರು ನೆಮ್ಮದಿಯಿಂದ ಬದುಕಿದರೆ ದೇಶದ ಅಭಿವೃದ್ಧಿಯಾಗಲಿದೆ. ಹಿಂದೆ 1995 ರಲ್ಲಿ ಸವೆ9ಯಲ್ಲಿ ನಡೆದ ತಪ್ಪುಗಳು ಮತ್ತೇ ಮರುಕಳಿಸಬಾರದು. ಜಮೀನು ಕಳೆದುಕೊಳ್ಳುವ ಪ್ರತಿಯೊಬ್ಬ ರೈತರ ಕುಟುಂಬಗಳಿಗೆ ಸೂರು ನಿರ್ಮಾಣಕ್ಕೆ ನಿವೇಶನ ಮತ್ತು ಕಟ್ಟಡ ನಿರ್ಮಾಣಕ್ಕೆ ಧನ ಸಹಾಯ ವ್ಯವಸ್ಥೆಯನ್ನು ರಾಜ್ಯ ಸರ್ಕಾರ ಕೈಗೊಳ್ಳಬೇಕೆಂದರು.

# ಭಾಗೋಡಿ ಗ್ರಾಮದಲ್ಲಿ ಅಕ್ರಮ ಮದ್ಯ, ಜೂಜಾಟ ತಡೆಗಟ್ಟುವಂತೆ ಮನವಿ



**ಚಿತ್ತಾಪುರ :** ತಾಲೂಕಿನ ಭಾಗೋಡಿ ಗ್ರಾಮದಲ್ಲಿ ಅನಧಿಕೃತವಾಗಿ ಯಾವುದೇ ಪರವಾನಿಗೆ ಇಲ್ಲದೆ ಕಿರಾಣ ಅಂಗಡಿ, ಪಾನ್ ಶಾಪ್, ಹೋಟೆಲ್ ಹಾಗೂ ಮನೆಗಳಲ್ಲಿ ಮದ್ಯ ಮಾರಾಟ ಹಾಗೂ ಜೂಜಾಟ ನಡೆಸುತ್ತಿರುವರನ್ನು ಪತ್ತೆ ಹಚ್ಚಿ ಅವರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಗ್ರಾಮದ ಹಿರಿಯ ಮುಖಂಡ ಡಾ.ಮಹಾಂತಗೌಡ ಪಾಟೀಲ ನೇತೃತ್ವದಲ್ಲಿ ಮುಖಂಡರು ಪೊಲೀಸ್ ಠಾಣೆಗೆ ಹೋಗಿ ಆರಕ್ಷಕ ಉಪನಿರೀಕ್ಷಕರಿಗೆ ಹಾಗೂ ವೃತ್ತ ನಿರೀಕ್ಷಕರಿ ಮನವಿ ಪತ್ರ ಸಲ್ಲಿಸಿದರು.

ನಂತರ ಮಾತನಾಡಿದ ಅವರು, ಭಾಗೋಡಿ ಗ್ರಾಮದಲ್ಲಿ ಅನಧಿಕೃತವಾಗಿ ಯಾವುದೇ ಪರವಾನಿಗೆ ಪಡೆದುಕೊಳ್ಳದೇ ಕಿರಾಣ ಅಂಗಡಿ, ಪಾನ್ ಶಾಪ್, ಹೋಟಲ್ ಹಾಗೂ ಮನೆಯಲ್ಲಿ ಮಧ್ಯ ಮಾರಾಟ ಮಾಡುವುದು ಹಾಗೂ ಜೂಜಾಟ (ಇಸ್ಪಿಟ್) ಸಹ ನಡೆಸುತ್ತಿದ್ದಾರೆ. ಇದರಿಂದ ಗ್ರಾಮದ ಚಿಕ್ಕ ಚಿಕ್ಕ ಮಕ್ಕಳು ಕುಡಿತದ ಚಟಕ್ಕೆ ಬಲಿಯಾಗುವ ಸಂಭವ ಹೆಚ್ಚಾಗಿರುತ್ತದೆ.

ಮೇಲಾಗಿ ಮಹಿಳೆಯರು ರಸ್ತೆಯಲ್ಲಿ ಕುಡುಕರ ಕಾಟದಿಂದ ತಿರುಗಾಡಲು ಸಹ ಭಯಪಡುತ್ತಿದ್ದಾರೆ. ಕುಡಿತದ ಚಟಕ್ಕೆ ಬಲಿಯಾಗಿ ಜೂಜಾಟ ಮಾಡಿ ಮನೆಯಲ್ಲಿ ಮಹಿಳೆಯರ ಮೇಲೆ ಇರುವ ಒಡವೆಗಳನ್ನು ಮಾರಿ ಕುಟುಂಬ ಬೀದಿಪಾಲಾಗುತ್ತಿವೆ. ಮೇಲಾಗಿ ಮಹಿಳೆಯರಿಗೆ ಕುಡಿದ ಅಮಲಿನಲ್ಲಿ ಬಂದು ಹೊಡೆ ಬಡೆ ಸಹ ಮಾಡುತ್ತಿದ್ದಾರೆ ಎಂದರು.

ಆದಕಾರಣ ಕೂಡಲೇ ಅನಧಿಕೃತವಾಗಿ ಕಿರಾಣ ಅಂಗಡಿ, ಪಾನ್ ಶಾಪ್, ಹೋಟಲ್ ಹಾಗೂ ಮನೆಗಳಲ್ಲಿ ಮಧ್ಯ ಮಾರಾಟ ಹಾಗೂ ಜುಜಾಟ ನಡೆಸುತ್ತಿರುವವರನ್ನು ಪತ್ತೆ ಹಚ್ಚಿ ಅವರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಂಡು ಮುಂದಿನ ದಿನಗಳಲ್ಲಿ ಮಧ್ಯ ಮಾರಾಟ ಹಾಗೂ ಜೂಜಾಟ ಆಡದಂತೆ ತಡೆಹಿಡಿಯಬೇಕೆಂದು ಆಗ್ರಹಿಸಿದ್ದಾರೆ.

ಗ್ರಾಮದ ಮುಖಂಡರಾದ ಶರಣಬಸಪ್ಪ ಐನಾಪುರ, ಶರಣಬಸಪ್ಪ ಎಸ್.ಪಾಟೀಲ, ರಾಜೇಂದ್ರಪ್ಪ ಆರಣಕಲ್, ಬಸವರಾಜ ಪಾಟೀಲ ದಳಪತಿ, ದೇವಿಂದ್ರ ನಾಟೀಕಾರ, ದೇವಿಂದ್ರ ಡೋಣಗಾಂವ, ಮುತ್ತಣ್ಣ ಶಿರೂರು, ಮಲ್ಲಿಕಾರ್ಜುನ ಏರಿ, ಜುಲ್ಫೇಕಾರ ಖಾಜಿ, ಗಂಗಾಧರ್ ಬುಳ್ಳಾ,

ಬೋಜು ಶೇರಿ, ಅಭಿಷೇಕ್ ಕಲಬುರ್ಗಿ, ಭೀಮು ಕೊಣಿನ್. ವಿಶ್ವನಾಥ ಕಲಬುರಗಿ, ನಾಗುಗೌಡ ರಾಮಪೂರ,

ಕಾಶಿನಾಥ ಭಂಗಿ, ಸುರೇಶ್ ಎರಿ, ಚಂದ್ರು ಐನಾಪುರ, ಸಾಬಣ್ಣ ಮುಗುಳನಾಗಾಂವ, ಮಲ್ಲು ಕುಸನೂರ ಸೇರಿದಂತೆ ಇತರರು ಇದ್ದರು.

# ಆರ್‌ಎಸ್‌ಎಸ್ ಚಟುವಟಿಕೆ ನಿರ್ಬಂಧಕ್ಕೆ ಪತ್ರ: ಸ್ವಾಗತಾರ್ಹ



**ಕಲಬುರಗಿ:** ಜಿಲ್ಲಾ ಉಸ್ತುವರಿ ಸಚಿವರಾದ ಪ್ರಿಯಂಕ್ ಖರ್ಗೆಯವರು ಆರ್‌ಎಸ್‌ಎಸ್ ಚಟುವಟಿಕೆಗಳಿಗೆ ನಿರ್ಬಂಧ ಹೇರಬೇಕು ಎಂದು ಮುಖ್ಯ ಮಂತ್ರಿಗಳಿಗೆ ಪತ್ರ ಬರೆದಿರುವುದು ಸ್ವಾಗತಾರ್ಹವಾಗಿದೆ ಎಂದು ದಲಿತ ಯುವ ಮುಖಂಡ ಸಿದ್ಧಾರ್ಥ ಮೇಲಿನಕೇರಿ ತಿಳಿಸಿದ್ದಾರೆ.

ಸರ್ಕಾರಿ ಶಾಲೆಗಳು, ಕಾಲೇಜುಗಳು ಮತ್ತು ಸಾರ್ವಜನಿಕ ಸಂಸ್ಥೆಗಳಲ್ಲಿ ಆರ್‌ಎಸ್‌ಎಸ್ ಚಟುವಟಿಕೆಗಳನ್ನು ನಡೆಸುವುದು ಸರಿಯಲ್ಲ. ಸಾರ್ವಜನಿಕ ಸ್ಥಳಗಳಲ್ಲಿ ಪಥಸಂಚಲನ ಮಾಡುವುದು ಹಾಗೂ ಕೆಲವೊಂದು ಘೋಷಣೆ ಕುಗುವಂತದ್ದು ಇಂತಹ ಚಟುವಟಿಕೆಗಳಿಂದ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುವಂತ ಮಕ್ಕಳ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ.

ಈ ಹಿನ್ನೆಲೆಯಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಆರ್‌ಎಸ್‌ಎಸ್ ಚಟುವಟಿಕೆಗಳಿಗೆ ನಿರ್ಬಂಧ ಹೇರಲು ಮುಖ್ಯಮಂತ್ರಿಗಳಿಗೆ ಪತ್ರ ಬರೆದಿರುವುದು ಸೂಕ್ತವಾಗಿದೆ ಎಂದು ಅವರು ತಿಳಿಸಿದ್ದಾರೆ.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State